05 ಅಕ್ಟೋಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 205 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ




ಕೊಲಂಬೊದಲ್ಲಿ ಇಂದು ಭಾರತ ಹಾಗು ಪಾಕಿಸ್ತಾನ ನಡುವಣ ಟಿ-20 ವಿಶ್ವಕಪ್ ಫೈನಲ್ ಪಂದ್ಯ ನಡೆಯಲಿದೆ.



ವಾಲ್ಮೀಕಿ ರಾಮಾಯಣ ನಿಜಕ್ಕೂ ಹೇಳುವುದು ಏನನ್ನು...? » 2



ಕಾದಂಬರಿ ಜಗತ್ತಿನ ಅನಭಿಷಿಕ್ತ ಸಾಮ್ರಾಟ



ಆಸ್ಟ್ರೇಲಿಯಾ ಪ್ರವಾಸಕ್ಕೆ ಟೀಂ ಇಂಡಿಯಾ ಪ್ರಕಟ » 4

# ಎನ್‌ಡಿಆರ್‌ಎಫ್ ಹಣ ಗ್ಯಾರಂಟಿಗೆ ಬಳಸಿಲ್ಲ

## ಬಿಜೆಪಿಯವರಿಗೆ ಕಾಮಾಲೆ ಕಣ್ಣು: ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

• ಪ್ರಜೋದಯ ವರದಿ

**ಬೆಂಗಳೂರು:** ಗ್ಯಾರಂಟಿ ಯೋಜನೆಗಳ ಯಶಸ್ಸು ಬಿಜೆಪಿಗರನ್ನು ಆತಂಕಗೊಳಿಸಿದೆ. ಕಾಂಗ್ರೆಸ್ ಸರ್ಕಾರವು ನುಡಿದಂತೆ ನಡೆದು ಗ್ಯಾರಂ ಟಿಗಳನ್ನು ತಪ್ಪದೇ ನೀಡುತ್ತಿದ್ದೇವೆಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಶನಿವಾರ ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎನ್‌ಡಿಆರ್‌ಎಫ್ ಅನುದಾನವನ್ನು ಗ್ಯಾರಂಟಿಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂಬ ವಿಪಕ್ಷ ನಾಯಕ ಆರ್.ಅಶೋಕ್ ಆರೋಪಕ್ಕೆ ಪ್ರತಿಕ್ರಿಯಿಸಿ, ಎನ್‌ಡಿಆರ್‌ಎಫ್ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಬಳಸಿಕೊಂಡಿಲ್ಲ. ಬಿಜೆಪಿಯ ವರು ಕಾಮಾಲೆ ಕಣ್ಣಿನಿಂದ ಎಲ್ಲವನ್ನೂ ನೋಡು ತ್ತಿದ್ದು, ಗ್ಯಾರಂಟಿ ಯೋಜನೆಗಳ ಯಶಸ್ಸು ಅವರಲ್ಲಿ ಆತಂಕವನ್ನುಂಟು ಮಾಡಿದೆ. ನಮ್ಮ ಗ್ಯಾರಂಟಿಗಳನ್ನು ಬಿಹಾರ, ದೆಹಲಿ, ಮಹಾರಾಷ್ಟ್ರ, ಮಧ್ಯ ಪ್ರದೇಶ, ಹರಿಯಾಣ ಸೇರಿ ಹಲವು ರಾಜ್ಯಗಳಲ್ಲಿ ಅನುಕರಿಸಿದ್ದಾರೆ. ಪ್ರಧಾನಿ ಮೋದಿ ಅವರು, ಗ್ಯಾರಂಟಿಗಳ ಅನುಷ್ಠಾನ ಸಾಧ್ಯವೇ ಇಲ್ಲ ಎಂದಿ ದ್ದರು. ಆದರೆ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದು ಗ್ಯಾರಂಟಿಗಳನ್ನು ತಪ್ಪದೇ ನೀಡುತ್ತಿದ್ದೇವೆ ಎಂದರು.



**ಜಿಲ್ಲೆಗೊಂದು ಮೆಡಿಕಲ್ ಕಾಲೇಜು, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ**

ಸರ್ಕಾರಿ ಆಸ್ಪತ್ರೆಗೆ ಬರುವವರೆಲ್ಲಾ ಬಡ-ಮಧ್ಯಮ ವರ್ಗದವರು. ಇವರಿಗೂ ಅತ್ಯುತ್ತಮ ಆರೋಗ್ಯ ಸೇವೆ ಒದಗಿಸಲು ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜು, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವುದು ನನ್ನ ಗುರಿ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದ ಉದ್ಘಾಟನೆ ಹಾಗು ಗೃಹ ವೈದ್ಯರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಬರೀ ಆಸ್ಪತ್ರೆ ಕಟ್ಟಡ ಕಟ್ಟಿದರೆ ಸಾಲದು. ಅದಕ್ಕೆ ತಕ್ಕಂತೆ ತಜ್ಞ ವೈದ್ಯರನ್ನೂ ನೇಮಿಸುತ್ತೇವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನಿಸಿದ್ದೇವೆ ಎಂದರು.

ಸದ್ಯ ಪ್ರಭಾಕರ್ ಕೋರೆ ಅವರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಸರ್ಕಾರಿ ಸ್ಪೆಷಾಲಿಟಿ ಆಸ್ಪತ್ರೆ ಯಲ್ಲಿ ಉಚಿತವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದಕ್ಕಾಗಿ ಕೋರೆ ಅವರಿಗೆ ಅಭಿನಂದಿಸುತ್ತೇನೆ. ನಮ್ಮ ಸರ್ಕಾರ ಅಸಮಾನತೆಯನ್ನು ಅಳಿಸುವ ದಿಕ್ಕಿನಲ್ಲಿ ತಳ ಸಮುದಾಯಗಳಿಗೆ ಅವಕಾಶ ಮತ್ತು ಅನುಕೂಲಗಳನ್ನು ಕಲ್ಪಿಸುತ್ತಿದೆ. ಅಸಮಾನತೆ ಇರುವವರೆಗೆ ತಳ ಸಮುದಾಯಗಳ ಜನ ಮುಖ್ಯ ವಾಹಿನಿಗೆ ಬರಲು ಸಾಧ್ಯವಿಲ್ಲ ಎನ್ನುವ ಮಾತು ಗಳನ್ನು ನೆನಪಿನಲ್ಲಿ ಇಟ್ಟುಕೊಂಡು ಕಾರ್ಯಕ್ರಮ ರೂಪಿಸುತ್ತಿದ್ದೇವೆಂದರು.

### ಗ್ಯಾರಂಟಿ ಟೀಕೆಗೆ ದೇವೇಗೌಡರ ಬಳಕೆ

ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರು ದೂರಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳು ಕೇವಲ ಜನಪರ ಯೋಜನೆಗಳಲ್ಲ. ಸಾಮಾಜಿಕ ನ್ಯಾಯ ಎತ್ತಿ ಹಿಡಿದು, ಕೋಟ್ಯಾಂತರ ಜನರ ಜೀವನದಲ್ಲಿ ಬದಲಾವಣೆ ತಂದಿವೆ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬ ದೇವೇಗೌಡರ ಹೇಳಿಕೆ ಬಿಜೆಪಿ-ಜೆಡಿಎಸ್ ದ್ವೇಷ ರಾಜಕಾರಣಕ್ಕೆ ಒಂದು ಉದಾಹರಣೆ. ಎರಡೂ ಕುರುಡು ದೃಷ್ಟಿಯುಳ್ಳ ಪಕ್ಷಗಳು ಎಂದು ಟೀಕಿಸಿದರು.

ಗ್ಯಾರಂಟಿ ಯೋಜನೆಗಳಿಗಾಗಿಯೇ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ 97 ಸಾವಿರ ಕೋಟಿ ಹಣವನ್ನು ವ್ಯಯಿಸುತ್ತಿರುವಾಗ ಆರ್ಥಿಕ ಪರಿಸ್ಥಿತಿ ಹೇಗೆ ಹದಗೆಡಲು ಸಾಧ್ಯ? ಸಾಮಾಜಿಕ ನ್ಯಾಯದ ಉದ್ದೇಶವನ್ನು ಹತ್ತಿಕ್ಕುವ ಮೂಲಕ ಗ್ಯಾರಂಟಿಗಳನ್ನು ಸ್ಥಗಿತಗೊಳಿಸಲು ಬಿಜೆಪಿ-ಜೆಡಿಎಸ್ ಬಯಸುತ್ತಿವೆ. ಇಂತಹ ದುಷ್ಟ ಪ್ರಯತ್ನವನ್ನು ಸಫಲವಾಗಲು ಕಾಂಗ್ರೆಸ್ ಬಿಡುವುದಿಲ್ಲ ಎಂದರು.

# ಹಾಸನಾಂಬ ಉತ್ಸವ: ದೇವೇಗೌಡರಿಗೆ ಆಹ್ವಾನ



• ಪ್ರಜೋದಯ ವರದಿ

**ಹಾಸನ:** ಶಕ್ತಿ ದೇವತೆ ಹಾಸನಾಂಬ ಹಾಗು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇದೇ ತಿಂಗಳ ಅ.9 ರಿಂದ 23ರವರೆಗೆ ನಡೆಯಲಿದ್ದು ಜಿಲ್ಲಾಡಳಿತದಿಂದ ಶನಿವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಅಧಿಕೃತ ಆಹ್ವಾನ ನೀಡಲಾಯಿತು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ದೇವಾಲಯ ಆಡಳಿತಾಧಿಕಾರಿ ಮಾರುತಿ ಹಾಗು ಇತರೆ ಅಧಿಕಾರಿಗಳು ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ ದೇವೇಗೌಡ ಅವರನ್ನು ಭೇಟಿಯಾಗಿ ಆತ್ಮೀಯ ಆಹ್ವಾನ ಕೋರಿದರು. ಸಂಸದ ಶ್ರೇಯಸ್ ಪಟೇಲ್ ಅವರು ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಭೇಟಿ ಮಾಡಿ ಶ್ರೀಗಳ ಆಶೀರ್ವಾದ ಪಡೆದು ಜಾತ್ರೆಗೆ ಆಗಮಿಸುಂತೆ ಕೋರಿದರು. ಬೆಂಗಳೂರು ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದ ನಾಥ ಸ್ವಾಮೀಜಿ, ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರನ್ನು ಭೇಟಿಯಾಗಿ ಕುಟುಂಬ ಸಮೇತ ಜಾತ್ರೆಗೆ ಬರುವಂತೆ ಆಹ್ವಾನ ನೀಡಿದರು.

## ಭಕ್ತರ ನೆರವಿಗಾಗಿ ಎ.ಐ. ಮೊರೆ ಹೋದ ದೇವಸ್ಥಾನ ಆಡಳಿತ ಮಂಡಳಿ

# ಹಾಸನಾಂಬೆ ದರ್ಶನಕ್ಕಾಗಿ ವಾಟ್ಸ್ಆ್ಯಪ್ ಚಾಟ್‌ಬಾಟ್

• ಪ್ರಜೋದಯ ವರದಿ

**ಹಾಸನ:** ಹಾಸನಾಂಬೆಯ ದರ್ಶನೋತ್ಸವಕ್ಕೆ ಇನ್ನು ಕೇವಲ ನಾಲ್ಕು ದಿನಗಳು ಮಾತ್ರ ಬಾಕಿ ಉಳಿದಿದೆ. ದೇವಿ ದರ್ಶನಕ್ಕೆ ಹೈಟೆಕ್ ಸ್ಪರ್ಶ ನೀಡಿರುವ ದೇವಸ್ಥಾನ ಆಡಳಿತ ಮಂಡಳಿ ಭಕ್ತರಿಗೆ ವಾಟ್ಸ್ಆ್ಯಪ್ ಚಾಟ್‌ಬಾಟ್ ಮೂಲಕ ಆನ್‌ಲೈನ್‌ನಲ್ಲಿ ಮಾಹಿತಿ ನೀಡಲು ಮುಂದಾಗಿದೆ.

ಟಿಕೆಟ್ ಬುಕಿಂಗ್, ದರ್ಶನ ಸಮಯ, ಸರತಿ ಸಾಲುಗಳ ಸ್ಥಿತಿಗತಿ, ಇ-ಹುಂಡಿ ಸೇರಿ ಹಲವು ಮಾಹಿತಿ ಚಾಟ್‌ಬಾಟ್ ಮೂಲಕ ಲಭ್ಯವಾಗಲಿದೆ. 6366105589 ನಂಬರ್‌ಗೆ ಮೆಸೇಜ್ ಮಾಡಿದರೆ ಯಾವ್ಯಾವ ದಿನ, ಎಷ್ಟು ಗಂಟೆಗೆ ದರ್ಶನ ಎನ್ನುವ ಮಾಹಿತಿಯೂ ಭಕ್ತರ ಮೊಬೈಲ್‌ನಲ್ಲೇ ತಿಳಿದುಕೊಳ್ಳಬಹುದಾಗಿದೆ.

ರಾಜ್ಯದಲ್ಲೇ ಮೊದಲ ಬಾರಿಗೆ ಅತ್ಯಾಧುನಿಕ ಶೈಲಿಯಲ್ಲಿ ಆನ್‌ಲೈನ್ ಸೇವೆಯನ್ನು ಆರಂಭಿಸ ಲಾಗಿದೆ. ಈ ಮೂಲಕ ಭಕ್ತರಿಗೆ ಹಾಸನಾಂಬ ದೇವಿಯ ದರ್ಶನದ ಬಗ್ಗೆ ಸಂಪೂರ್ಣ ಮಾಹಿತಿ ಯನ್ನು ಕನ್ನಡ




ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬೆರಳ ತುದಿಯಲ್ಲೇ ಲಭ್ಯವಾಗಲಿದೆ.

ಎ.ಐ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ತಂತ್ರಜ್ಞಾನದ ಮೂಲಕ ಭಕ್ತರಿಗೆ ಅತ್ಯಾಧುನಿಕ ಸೇವೆ ನೀಡಲು ಮುಂದಾಗಿರುವ ಹಾಸನಾಂಬ ದೇವಾ ಲಯ ಆಡಳಿತ ಮಂಡಳಿ ನೀಡಿರುವ ಸಂಖ್ಯೆಯನ್ನು ಭಕ್ತರು ತಮ್ಮ ಮೊಬೈಲ್‌ನಲ್ಲಿ ಸೇವ್ ಮಾಡಿಕೊಂಡು ಹಾಯ್ ಎಂಬ ಸಂದೇಶ ಕಳುಹಿಸಿದರೆ ಚಾಟ್ ಜಿಪಿಟಿ ಮಾದರಿಯಲ್ಲಿ ಹಾಸ ನಾಂಬೆ ದೇವಾಲಯದ ಬಗ್ಗೆ ಬೇಕಾದ ಮಾಹಿತಿಯನ್ನು ವಾಟ್ಸ್ಆ್ಯಪ್ ಚಾಟ್ ಬಾಟ್ ನೀಡಲಿದೆ. ಅದರಿಂದ ಯಾವ್ಯಾವ ದಿನ ಎಷ್ಟು ಗಂಟೆಗೆ ದೇವಿ ದರ್ಶನ, ಸರತಿ » ನಾಲ್ಕನೇ ಪುಟದಲ್ಲಿ

### ಸಿಸಿಟಿವಿಯಲ್ಲೇ ಭಕ್ತರ ಸಂಖ್ಯೆ ಎಣಿಕೆ

ಕಳೆದ ವರ್ಷ ಹಾಸನಾಂಬೆ ದರ್ಶನಕ್ಕೆ ಬರೋಬ್ಬರಿ 20 ಲಕ್ಷಕ್ಕೂ ಅಧಿಕ ಭಕ್ತರು ಆಗಮಿಸಿದ್ದ ಹಿನ್ನಲೆ ಈ ವರ್ಷ ಮತ್ತಷ್ಟು ಭಕ್ತರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ. ಕಳೆದ ಬಾರಿ ಟಿಕೆಟ್, ಪಾಸ್ ಹಂಚಿಕೆ ಹಾಗು ಅಂದಾಜಿನ ಮೇಲೆ 20ಲಕ್ಷಕ್ಕೂ ಹೆಚ್ಚು ಭಕ್ತರು ದರ್ಶನ ಪಡೆದಿದ್ದರು ಎಂದು ಊಹಿಸಲಾಗಿತ್ತು. ಆದರೆ, ಈ ಬಾರಿ ಸಿಸಿಟಿವಿ ಕ್ಯಾಮರಾದಲ್ಲೇ ದೇವಿಯ ದರ್ಶನ ಪಡೆದ ಭಕ್ತರ ಸಂಖ್ಯೆಯನ್ನು ಕೂಡ ಮುಖ ಚಹರೆಯೊಂದಿಗೆ ಲೆಕ್ಕಹಾಕಲು ಅತ್ಯಾಧುನಿಕ ಸಿಸಿಟಿವಿ ಕ್ಯಾಮರಾಗಳನ್ನು ಅಳಡಿಕೆ ಮಾಡಲಾಗಿದೆ.

# ಅರಣ್ಯ ಇಲಾಖೆಯಿಂದ ರೈತರ ಒಕ್ಕಲೆಬ್ಬಿಸಲು ಹುನ್ನಾರ

## ಮುಂಜೂರಾತಿ ರದ್ದುಗೊಳಿಸುವುದಕ್ಕೆ ಬಿ.ಶಿವರಾಮ್ ವಿರೋಧ | ಜನರ ಹಿತಕಾಪಾಡುವಂತೆ ಸರ್ಕಾರಕ್ಕೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಬೇಲೂರು ತಾಲ್ಲೂಕಿನ ಮಾದಿಹಳ್ಳಿ ಹೋಬಳಿ ಶಿವಪುರ ಕಾವಲು ಸರ್ವೇ ನಂ.1 ರಲ್ಲಿ ಒಟ್ಟು 3,676 ಎಕರೆ ಪ್ರದೇಶವನ್ನು ಸೀಗೆಗುಡ್ಡ ರಾಜ್ಯ ಅರಣ್ಯವೆಂದು ಅಧಿಸೂಚನೆ ಹೊರಡಿಸಿ, ಅರಣ್ಯ ಇಲಾಖೆ ಅಲ್ಲಿನ ಜನರನ್ನು ಒಕ್ಕಲೆಬ್ಬಿಸಲು ಹೊರಟಿದೆ ಎಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಪುರ ಕಾವಲಿನ ಸ.ನಂ.1 ರಲ್ಲಿ 188 ಎಕರೆ ಜಮೀನಿಗೆ ಸರ್ಕಾರ 1988ರಲ್ಲಿ ಕಲಂ-4 ಅಧಿಸೂಚನೆ ಹೊರಡಿಸಿ, ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಿದೆ. ಸರ್ವೇ ನಂ.1ರ ವ್ಯಾಪ್ತಿಗೆ ಅಡವಿ ಬಂಟೇನಹಳ್ಳಿ ಗ್ರಾಮ ಕೂಡ ಸೇರಿರುತ್ತದೆ. 1895ರಲ್ಲಿ ಅಂದಿನ ಮೈಸೂರು ಮಹಾರಾಜ ಸರ್ಕಾರ ಶಿವ ಪುರ ಕಾವಲಿನ ಸ. ನಂ.1 ಸೇರಿ ಸೀಗೆ ಗುಡ್ಡ ಸ್ಟೇಟ್ ರಿಸರ್ವ್ ಫಾರೆಸ್ಟ್ ಎಂದು ಅಧಿಸೂಚನೆ ಪ್ರಕಟಿಸಿದೆ. ಆದರೆ, 1978ರಿಂದ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದನ್ನು ಕಂದಾಯ ಇಲಾಖೆ



ಸಕ್ರಮಗೊಳಿಸಿ 223ಕ್ಕೂ ಹೆಚ್ಚು ರೈತರಿಗೆ ಮಂಜೂರಾತಿ ನೀಡಿದೆ. ಆದರೀಗ ಅರಣ್ಯ ಇಲಾಖೆ ಒತ್ತುವರಿ ತೆರವಿಗೆ ಮುಂದಾಗಿರುವುದು ಖಂಡನೀಯ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಒತ್ತಾಯಿ ಸಿದರು.

ಶಿವಪುರ ಕಾವಲಿನ ಸ.ನಂ.1ರ ಅತಿಕ್ರಮಣದಾರರಿಗೆ ಕಲಂ-05ರಡಿ ನೋಟೀಸ್ ಜಾರಿ ಮಾಡಿದ ಸಮಯದಲ್ಲಿ ಸೀಗೆಗುಡ್ಡ ಕಾವಲಿನ ಮೀಸಲು ಅರಣ್ಯ ಪ್ರದೇಶದಲ್ಲಿ ಅಡವಿ ಬಂಟೇನ ಹಳ್ಳಿ ಗ್ರಾಮದ ಸಾಗುವಳಿದಾರರು ತಮ್ಮ ಅನುಭವದಲ್ಲಿರುವ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿದ್ದಾರೆ. ಈ ದಾಖಲೆಗಳನ್ನು ತಾಲ್ಲೂಕು ಕಚೇರಿಯಿಂದ 1961-62 ರಿಂದ 1969-70ರವರೆಗೆ 61 ಜನ ಸಾಗುವಳಿದಾರರಿಗೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ. ಅವರೆಲ್ಲರೂ ಅಡವಿ ಬಂಟೇನಹಳ್ಳಿ ಗ್ರಾಮದ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಸಾಗುವಳಿ ಚೀಟಿಯಲ್ಲಿ ಶಿವಪುರ ಕಾವಲು ಎಂದು ಬರೆಯಲಾಗಿದೆ. ನಕ್ಷೆಯಲ್ಲಿ ಅಡವಿ ಬಂಟೇನಹಳ್ಳಿ ಗ್ರಾಮವನ್ನು ಅರಣ್ಯ ಪ್ರದೇಶದಿಂದ ಹೊರಗಿಡಲಾಗಿದೆ. ಈ ದ್ವಂದ್ವ ನಿಲುವಿನಿಂದ ರೈತರು ಆತಂಕಕ್ಕೀಡಾಗಿದ್ದಾರೆಂದು ಹೇಳಿದರು.

ಅರಣ್ಯ ಇಲಾಖೆ ದಾಖಲೆಗಳಲ್ಲಿ 1895 ರಲ್ಲಿ ಸೀಗೆಗುಡ್ಡ ಸ್ಟೇಟ್ ರಿಸರ್ವ್ ಫಾರೆಸ್ಟ್ ಎಂದು ಘೋಷಣೆಯಾಗಿದ್ದು, ಅದರ ವಿಸ್ತೀರ್ಣ 8 ಸ್ಕ್ವಯರ್ ಮೈಲಿ ಇದೆ. ಅರಣ್ಯ ಇಲಾಖೆ ಪ್ರಕಾರ ಶಿವಪುರ ಕಾವಲಿನ ಸ.ನಂ.1 ಸೀಗೆಗುಡ್ಡ ಕಾವಲಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಪ್ರದೇಶ ಮೀಸಲು ಅರಣ್ಯವೆಂದು ಘೋಷಣೆಯಾಗಿದ್ದು, ಸಾಗುವಳಿ ಚೀಟಿ ನೀಡಿದ್ದು ಕಾನೂನು ಬಾಹಿರ'ವಾಗಿದೆ. ಈ ಪ್ರದೇಶದಲ್ಲಿ ಸಾಗುವಳಿ ಚೀಟಿ ನೀಡಲು ಹಾಗು ಸಾಗುವಳಿ ಮಾಡಲು ಅವಕಾಶ ಇರುವುದಿಲ್ಲ ಹೀಗಿದ್ದರೂ ರೈತರಿಗೆ ಸಾಗುವಳಿ ಚೀಟಿ ನೀಡಲಾಗಿದೆ. ಆದ್ದರಿಂದ ಸರ್ಕಾರ ರೈತರ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಂಡು, ಅರಣ್ಯ ಪ್ರದೇಶ ಗುರುತಿಸಲು ನೇಮಕಗೊಂಡಿರುವ ಎಸ್‌ಐಟಿಗೆ ರೈತರ ಪರ ಶಿಫಾರಸ್ಸು ಕ್ರಮ ಅನುಸರಿಸಲು ನಿರ್ದೇಶನ ನೀಡಬೇಕೆಂದು ಹೇಳಿದರು.

**ಗಡಿರೇಖೆ ಗುರುತಿಸಬೇಕು**

ಸಾಗುವಳಿ ಚೀಟಿ ನೀಡಿರುವ ರೈತರು ಸೀಗೆಗುಡ್ಡ ಕಾವಲು ಗಡಿ ಮತ್ತು ಶಿವಪುರ ಕಾವಲು ಗಡಿ ಬೇರೆ ಬೇರೆ ಇದ್ದು, ಸಾಗುವಳಿ ಚೀಟಿ ನೀಡಿದ ಪ್ರದೇಶವು ಶಿವಪುರ ಕಾವಲ್‌ನಲ್ಲಿ ಇದ್ದು, ಗಡಿ ರೇಖೆಯು ಅಳತೆ ಮಾಡಿದರೆ ಮತ್ತು ಹದುಬಸ್ತು ಮಾಡಿದರೆ ಗಡಿ ರೇಖೆ ಗೊತ್ತಾಗುತ್ತದೆ. ಆದ್ದರಿಂದ ಶಿವಪುರ ಕಾವಲಿನ ಮತ್ತು ಸೀಗೆಗುಡ್ಡ ಕಾವಲಿನ ಗಡಿ ರೇಖೆಯು ಗುರುತಿಸಬೇಕು. ಶಿವಪುರ ಕಾವಲು ಮತ್ತು ಸೀಗೆಗುಡ್ಡ ಕಾವಲಿನ ಗಡಿ ರೇಖೆಯನ್ನು ಗುರುತಿಸಿದರೆ ರೈತರು ಸಾಗುವಳಿ ಮಾಡುತ್ತಿದ್ದ ಜಮೀನು ಶಿವಪುರ ಕಾವಲಿಗೆ ಸಂಬಂಧಿಸಿದೆಯೊ ಅಥವಾ ಸೀಗೆಗುಡ್ಡ ಕಾವಲಿಗೆ ಸಂಬಂಧಿಸಿದೆಯೊ ಎಂದು ತಿಳಿದುಬರುತ್ತದೆ. ಈ ಗಡಿ ರೇಖೆಯನ್ನು ರೈತರು ಹೇಳುವ ಪ್ರಕಾರ ಗುರುತಿಸಿ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿದರು.

### ನೋಟೀಸ್ ಜಾರಿ, ರಕ್ಷಣೆಗೆ ಆಗ್ರಹ

ತಟ್ಟೆಹಳ್ಳಿ, ಅರಗೂರು, ಕ್ಯಾತನಕೆರೆ, ಕೊಮ್ಮಾರನಹಳ್ಳಿ, ಮಲ್ಲಾಪುರ, ಕೋಡಿಹಳ್ಳಿ ಇನ್ನೂ ಮುಂತಾದ ಗ್ರಾಮಗಳ ಒಟ್ಟು 94 ರೈತರು ಅಂದಾಜು 105 ಎಕರೆಯಷ್ಟು ಅರಣ್ಯ ಪ್ರದೇಶ ವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಒತ್ತುವರಿದಾರರಿಗೆ ಈಗಾಗಲೇ ಹಾಸನ ವೃತ್ತದ ಅರಣ್ಯ ವ್ಯವಸ್ಥಾಪನಾಧಿಕಾರಿ ನೋಟೀಸ್ ಜಾರಿ ಮಾಡಿದ್ದಾರೆ. ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ, ಸರ್ಕಾರ ರೈತರನ್ನು ರಕ್ಷಿಸಬೇಕೆಂದು ಒತ್ತಾಯಿಸಿದರು.

## ಪತ್ರಕರ್ತ ವೆಂಕಟೇಶ್ ಬರಹಗಾರರ ಸಂಘದ ಜಿಲ್ಲಾ ಗೌರವಾಧ್ಯಕ್ಷ



ಹಾಸನ: ರಾಜ್ಯ ಬರಹಗಾರರ ಸಂಘದ ಜಿಲ್ಲಾ ಗೌರವಾಧ್ಯಕ್ಷರನ್ನಾಗಿ ಪತ್ರಕರ್ತ ವೆಂಕಟೇಶ್ ಅವರನ್ನು ನೇಮಿಸಿ ಸಂಘದ ರಾಜ್ಯಾಧ್ಯಕ್ಷ ಮಧುನಾಯ್ಕ ಲಂಬಾಣಿ ಅವರು ಆದೇಶಿಸಿದ್ದಾರೆ. ಹೂವಿನ ಹಡಗಲಿ ಯಲ್ಲಿ ಕೇಂದ್ರ ಕಚೇರಿ ಹೊಂದಿರುವ ರಾಜ್ಯ ಬರಹಗಾರರ ಸಂಘ ಈಗಾಗಲೇ ರಾಜ್ಯಾದ್ಯಂತ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಎಲ್ಲಾ ಜಿಲ್ಲೆ ಹಾಗು ತಾಲ್ಲೂಕು ಘಟಕಗಳನ್ನು ಹೊಂದಿದೆ. ಸಂಘದ ಜಿಲ್ಲಾಧ್ಯಕ್ಷ ಸುಂದ ರೇಶ್ ಉಡುವಾರೆ ಹಾಗು ಪದಾಧಿಕಾರಿ ಗಳು ವೆಂಕಟೇಶ್ ಅವರಿಗೆ ಅಭಿನಂದಿಸಿದ್ದಾರೆ.

# ಮಾದಿಹಳ್ಳಿ ಗೋಮಾಳ ಒತ್ತುವರಿ ತೆರವುಗೊಳಿಸಿದ ಎಸಿ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕೆ.ಹೊಸ ಕೋಟೆ ಹೋಬಳಿ ಮಾದಿಹಳ್ಳಿ ಗ್ರಾಮದ ಗೋಮಾಳವನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಕಾಫಿ ತೋಟ ನಿರ್ಮಾಣಕ್ಕೆ ಮುಂದಾಗಿದ್ದನ್ನು ತಡೆದ ಉಪವಿಭಾಗಾಧಿಕಾರಿ ಹೆಚ್.ಡಿ.ರಾಜೇಶ್ ಅವರು ಪರಿಶೀಲನೆ ನಡೆಸಿ ಶನಿವಾರ ಒತ್ತುವರಿ ತೆರವುಗೊಳಿಸಿದ್ದಾರೆ.

ಗ್ರಾಮದ ಸರ್ವೇ ನಂ.8ರಲ್ಲಿ 5 ರಿಂದ 6 ಎಕರೆಯಷ್ಟು ಗೋಮಾಳ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಮಂಜುಳಾ, ವೇಣುರಾಜು, ಲೋಕೇಶ್ ಎಂಬುವವರು ಜೆಸಿಬಿ ಯಂತ್ರಗಳನ್ನು ಬಳಸಿ, ನೈಸರ್ಗಿಕವಾಗಿ ಬೆಳೆದಿದ್ದ ಮರಗಿಡಗಳನ್ನು ಅಕ್ರಮವಾಗಿ ತೆರವುಗೊಳಿಸಿ ಗೋಮಾಳವನ್ನು ಸ್ವಾಧೀನ ಪಡಿಸಿಕೊಳ್ಳಲು ಕಾಫಿ ಗಿಡಗಳನ್ನು ಹಾಕಲು ಮುಂದಾಗಿದ್ದರು.




ಈ ಬಗ್ಗೆ ಗ್ರಾಮಸ್ಥರು ತಹಶೀಲ್ದಾರ್ ಮಲ್ಲಿಕಾರ್ಜುನ್ ಅವರ ಗಮನಕ್ಕೆ ಹಲವು ಬಾರಿ ತಂದರೂ, ಒತ್ತುವರಿದಾರರೊಂದಿಗೆ ಶಾಮೀಲಾಗಿದ್ದ ತಹಶೀಲ್ದಾರ್ ಕ್ರಮ ತೆಗೆದು ಕೊಂಡಿರಲಿಲ್ಲ. ಈ ಬಗ್ಗೆ ಗ್ರಾಮಸ್ಥರು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಗಮನಕ್ಕೆ ತಂದು, ಒತ್ತುವರಿ ತೆರವುಗೊಳಿಸಿ ಸರ್ಕಾರಿ ಗೋಮಾಳ ಜಾಗವನ್ನು ರಕ್ಷಣೆ ಮಾಡಿ, ಗ್ರಾಮದ ಬಳಕೆಗೆ ಮೀಸಲಿಡುವಂತೆ ಮನವಿ ಮಾಡಿದ್ದರು.

ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿ ಹೆಚ್.ಡಿ.ರಾಜೇಶ್ ಅವರಿಗೆ ಸೂಚನೆ ನೀಡಿದ್ದರು. ಈ ನಡುವೆ ಶನಿವಾರ ಒತ್ತುವರಿದಾರರು ಏಕಾಏಕಿ 10 ರಿಂದ 15 ಕಾರ್ಮಿಕರೊಂದಿಗೆ ಬಂದು ಕಾಫಿ ಗಿಡಗಳನ್ನು ನಾಟಿ ಮಾಡಲು ಮುಂದಾಗಿದ್ದರು. ಅದನ್ನು ಗಮನಿಸಿದ ಸ್ಥಳೀಯರು ದೂರವಾಣಿ ಮೂಲಕ ಉಪವಿಭಾಗಾಧಿಕಾರಿಗೆ ಮಾಹಿತಿ ನೀಡಿದ್ದಾರೆ.

ತಕ್ಷಣ ಸ್ಥಳಕ್ಕಾಗಮಿಸಿದ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಮಲ್ಲಿಕಾರ್ಜುನ, ಕಂದಾಯ ನಿರೀಕ್ಷಕ ಗೋವಿಂದರಾಜು, ಗ್ರಾಮ ಲೆಕ್ಕಾಧಿಕಾರಿ ರಂಗಸ್ವಾಮಿ ಅವರೊಂದಿಗೆ ಪರಿಶೀಲನೆ ನಡೆಸಿದಾಗ ಗೋಮಾಳ ಎಂಬುದು ದೃಢಪಟ್ಟಿದೆ. ಈ ಹಿನ್ನಲೆ ಸರ್ಕಾರಿ ಗೋಮಾಳದಲ್ಲಿ ಅಕ್ರಮವಾಗಿ ಯಾವುದೇ ಚಟುವಟಿಕೆ ನಡೆಸದಂತೆ ಒತ್ತುವರಿದಾರರಿಗೆ ಎಚ್ಚರಿಕೆ ನೀಡಿ, ಗೋಮಾಳ ಭೂಮಿಯನ್ನು ರಕ್ಷಣೆ ಮಾಡಿದ್ದಾರೆ. ಈ ವೇಳೆ ಗ್ರಾಮಸ್ಥರಾದ ಮಧುಸೂದನ್, ಚಂದ್ರೇಗೌಡ, ಶರತ್ ಕುಮಾರ್‌ಹಾಜರಿದ್ದರು.

# ಹಾಸನ ಯುವಕರಿಬ್ಬರು ಮಲ್ಪೆ ಸಮುದ್ರ ಪಾಲು



• ಪ್ರಜೋದಯ ವರದಿ

**ಹಾಸನ:** ಉಡುಪಿಗೆ ಪ್ರವಾಸಕ್ಕೆಂದು ತೆರಳಿದ್ದ ಹಾಸನದ ಯುವಕರ ಪೈಕಿ ಇಬ್ಬರು ಮಲ್ಪೆ ಸಮುದ್ರದ ಅಲೆಯಲ್ಲಿ ಕೊಚ್ಚಿ ಹೋಗಿ ಮೃತಪಟಿದ್ದಾರೆ. ಮಿಥುನ್ (19), ಶಶಾಂಕ (22) ಮೃತರು.

ಹಾಸನದಿಂದ 7 ಮಂದಿಯ ತಂಡ ಪ್ರವಾಸಕ್ಕೆ ಹೊರಟಿದ್ದು, ಶುಕ್ರವಾರ ಬೆಳಿಗ್ಗೆ ಮಂಗಳೂರಿನ ಕೊರಗಜ್ಜ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದಿದ್ದರು. ಮಧ್ಯಾಹ್ನದ ಊಟ ಮುಗಿಸಿ, ಸಂಜೆ ವೇಳೆ ಉಡುಪಿಯ ಮಲ್ಪೆ ಬೀಚ್‌ಗೆ ಆಗಮಿಸಿದ್ದರು. 7 ಮಂದಿಯಲ್ಲಿ ಒಬ್ಬ ದಡದಲ್ಲಿ ಉಳಿದಿದ್ದು ಉಳಿದ 6 ಮಂದಿ ನೀರಿಗೆ ಇಳಿದು ಆಟವಾಡುತ್ತಿದ್ದರು.

ಅವರಲ್ಲಿ ಮಿಥುನ್ ಮತ್ತು ಶಶಾಂಕ್ ಈಜುತ್ತಾ ಮುಂದೆ ಹೋಗಿದ್ದಾರೆ. ಈ ವೇಳೆ ಇಬ್ಬರೂ ಬೃಹತ್ ಅಲೆಯ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ಶಶಾಂಕ್‌ನನ್ನು ಸ್ಥಳೀಯರು ಸೇರಿ ಈಶ್ವರ ಮಲ್ಪೆ ತಂಡ ರಕ್ಷಿಸಿ, ತಕ್ಷಣ ಉಡುಪಿ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ನಾಪತ್ತೆಯಾಗಿದ್ದ ಮಿಥುನ್ ಪತ್ತೆಗಾಗಿ ಪೊಲೀಸರು, ಮುಳುಗು ತಜ್ಞ ಈಶ್ವರ ಮಲ್ಪೆ ಶೋಧ ಕಾರ್ಯ ನಡೆಸಿದ್ದು, ಶನಿವಾರ ಸಂಜೆ ಸಮುದ್ರದ ತಟದಲ್ಲಿ ಮೃತದೇಹ ಪತ್ತೆಯಾಗಿದೆ.

# ಬೀದಿ ನಾಯಿಗಳಿಂದ ಮರಭೂಮಿ ಬೆಕ್ಕು ರಕ್ಷಿಸಿದ ಸ್ಥಳೀಯರು

• ಪ್ರಜೋದಯ ವರದಿ

**ಸಕಲೇಶಪುರ:** ಮರಭೂಮಿಯ ಪುಟ್ಟ ಸಿಂಹ ಎಂದೇ ಕರೆಯಲ್ಪಡುವ ಪುನುಗು ಜಾತಿಗೆ ಸೇರಿದ ಮರಭೂಮಿಯ ಬೆಕ್ಕನ್ನು ಬೀದಿ ನಾಯಿಗಳ ದಾಳಿಯಿಂದ ಸ್ಥಳೀಯರು ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಪಶ್ಚಿಮ ಘಟ್ಟದಲ್ಲಿ ವಾಸಿಸುವ ಬೆಕ್ಕು ಆಹಾರ ಅರಸಿ ಪಟ್ಟಣ ಸಮೀಪ ಬಂದಿತ್ತು. ಅದನ್ನು ಕಂಡ 20ಕ್ಕೂ ಹೆಚ್ಚು ಬೀದಿ ನಾಯಿಗಳು ಅಟ್ಟಾಡಿಸಿದವು. ನಾಯಿಗಳಿಗೆ ಪ್ರತಿರೋಧ ಒಡ್ಡುತ್ತಲೇ ನಿಂತ ಬೆಕ್ಕು ನಿತ್ರಾಣಗೊಂಡು ಅಸಹಾಯಕ ಸ್ಥಿತಿಗೆ ತಲುಪಿತು. ನಾಯಿಗಳ ಚೀರಾಟ ಗಮನಿಸಿದ



ಪಟ್ಟಣದ ಸಲೀಂ ಹಾಗು ಕೇಶವ ಎಂಬುವವರು ಹತ್ತಿರ ಹೋದಾಗ ಅಪರೂಪದ ಜಾತಿಯ ಬೆಕ್ಕು ಇರುವುದನ್ನು ಕಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಅಧಿಕಾರಿ ಅರ್ಜುನ್ ಹಾಗು ಸಿಬ್ಬಂದಿ ಬೆಕ್ಕನ್ನು ಪಡೆದು ನಂತರ ಮಾರನಹಳ್ಳಿ ರಕ್ಷಿತಾರಣ್ಯ ಪ್ರದೇಶಕ್ಕೆ ಬಿಟ್ಟರು.

**ಮರಭೂಮಿ ಬೆಕ್ಕಿನ ವಿಶೇಷತೆ**

40 ರಿಂದ 50 ಸೆಂ.ಮೀ. ಉದ್ದದ ಬೆಕ್ಕು ಬೂದು ಬಣ್ಣವನ್ನೊಳಗೊಂಡಿದೆ. ಕಿವಿಗಳು ವಿಶಾಲವಾಗಿದ್ದು ಚುರುಕಾಗಿ ಓಡಾಡುತ್ತದೆ. ಕಾಲುಗಳ ಕೆಳಭಾಗದಲ್ಲಿ ರೋಮ ಇರುತ್ತದೆ. ಬಿಸಿ ಮರಳಿನ ಮೇಲೆ ನಡೆಯುವಾಗ ಪಾದಗಳಿಗೆ ಬಿಸಿ ತಾಗದಂತೆ ರಕ್ಷಣೆ ಮಾಡಿಕೊಳ್ಳುತ್ತದೆ. ಮರಭೂಮಿಯಲ್ಲಿ ಕಾಣಸಿಗುವ ಬೆಕ್ಕು ಪಶ್ಚಿಮಘಟ್ಟದಲ್ಲೂ ಇರುವುದು ವಿಶೇಷವಾಗಿದೆ. ಮಾನವನ ಹಸ್ತಕ್ಷೇಪ ಹಾಗು ವಾಸಸ್ಥಾನ ನಾಶದಿಂದ ಜೀವ ಸಂಕುಲ ಅಪಾಯ ಸ್ಥಿತಿ ಎದುರಿಸುತ್ತಿದೆ.

### ಬೀದಿ ನಾಯಿ ಉಪಟಳ ಅಧಿಕ

ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ವಿಪರೀತವಾಗಿದ್ದು ಅವುಗಳಿಗೆ ಕಡಿವಾಣ ಹಾಕ ಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇತ್ತೀಚೆಗೆ ನಾಯಿಗಳ ಸಂತತಿ ಹೆಚ್ಚಾಗಿದ್ದು ಮಕ್ಕಳು, ಮಹಿಳೆಯರು ರಸ್ತೆಯಲ್ಲಿ ಓಡಾಡದ ಪರಿಸ್ಥಿತಿ ಇದೆ. ಆಹಾರ ಅರಸಿ ಮನೆ ಬಾಗಿಲಿಗೆ ಬರುವ ನಾಯಿಗಳು ಮೈ ಮೇಲೆ ಎರಗುತ್ತವೆ. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕು. ಮಲೆನಾಡು ಭಾಗವಾದ್ದರಿಂದ ಅಳಿವಿನಂಚಿನಲ್ಲಿರುವ ಪ್ರಾಣಿ ಪಕ್ಷಿಗಳು ಕಾಣಿಸಿ ಕೊಳ್ಳುವುದು ಸಾಮಾನ್ಯ. ಬೀದಿ ನಾಯಿಗಳು ಈ ರೀತಿ ದಾಳಿ ನಡೆಸಿದರೆ ಅವುಗಳ ಪ್ರಾಣಕ್ಕೆ ಕುತ್ತುಂಟಾಗುವ ಸಾಧ್ಯತೆಯಿದೆ ಎಂದರು.

## ವಿಶ್ವ ಹಿರಿಯ ನಾಗರಿಕರ ದಿನಾಚರಣೆ | ವೃದ್ಧರಿಗೆ ಆಟೋಟ ಸ್ಪರ್ಧೆ, ಆರೋಗ್ಯ ಶಿಬಿರ

# ಹಿರಿಯರಿಲ್ಲದ ಮನೆ ಕಳಸವಿಲ್ಲದೆ ಮಂದಿರದಂತೆ

• ಪ್ರಜೋದಯ ವರದಿ

**ಹಾಸನ:** ಹಿರಿಯರಿಲ್ಲದ ಮನೆ ಕಳಸವಿಲ್ಲದ ಮಂದಿರವಿದ್ದಂತೆ. ಹಳೆಯ ಬೇರಿನೊಂದಿಗೆ ಹೊಸ ಚಿಗುರು ಎಂಬ ಮಾತಿನಂತೆ ಹಿರಿಯರೊಟ್ಟಿಗೆ ಬದುಕಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಉಪನ್ಯಾಸ ನೀಡಿದ ಅವರು, ಪರಸ್ಪರ ಸಂಬಂಧ ಪ್ರೀತಿಯಿಂದ ಅರ್ಥ ಮಾಡಿಕೊಂಡಾಗ ಸಾರ್ಥಕ ಜೀವನ ನಡೆಸಲು ಸಾಧ್ಯವಾಗುತ್ತದೆ. ಮಾನಸಿಕವಾಗಿ ಬದಲಾವಣೆ ಮಾಡಿಕೊಂಡು ಹೊಂದಾಣಿಕೆಯಿಂದ ಇದ್ದರೆ ಲವಲವಿಕೆಯಿಂದ ಸಂಧ್ಯಾ ಕಾಲದ ಜೀವನ ನಡೆಸಲು ಸಾಧ್ಯವಾಗುತ್ತದೆಂದು ತಿಳಿಸಿದರು.

ಹಿರಿಯರು ನಿರೀಕ್ಷೆಗಳನ್ನು ಕಡಿಮೆ ಮಾಡಿಕೊಂಡಾಗ ಉತ್ತಮ ಜೀವನ ನಡೆಸಲು



ಅನುಕೂಲ ವಾಗುತ್ತದೆ. ಮನುಷ್ಯ ಸಂಘ ಜೀವಿ. ಒಂಟಿತನ ಅವರಿಗೆ ದೊಡ್ಡ ಶತ್ರು. ಇಳಿ ವಯಸ್ಸಿನಲ್ಲಿ ಪತಿ-ಪತ್ನಿ ಇಬ್ಬರಲ್ಲಿ ವಯೋಸಹಜವಾಗಿ ಒಬ್ಬರು ಮೃತಪಟ್ಟ ಸಂದರ್ಭದಲ್ಲಿ ಒಂಟಿತನ ಕಾಡುವುದು ಸಹಜ. ನೋವು ಕಷ್ಟ ಎಲ್ಲರಿಗೂ ಇರುತ್ತದೆ. ಅದನ್ನು ನಗು ನಗುತ್ತಾ ಸ್ವೀಕರಿಸಿ ಜೀವನೋತ್ಸಾಹ ಬೆಳೆಸಿಕೊಳ್ಳಬೇಕೆಂದರು.

ಸರ್ಕಾರ ಹಿರಿಯ ನಾಗರಿಕರ ಪಾಲನೆ ಪೋಷಣೆ ಹಾಗು ಸಂರಕ್ಷಣೆಗಾಗಿ ಜಾರಿಗೆ ತಂದಿರುವ ಕಾಯ್ದೆ ಬಗ್ಗೆ ವಿವರಿಸಿ ಯಾವ ತೊಂದರೆಗೆ ಸಿಲುಕಿದಾಗ ಕಾನೂನಾತ್ಮಕವಾಗಿ ಉಚಿತ ಸೇವೆಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನೀಡಲಾಗುವುದು. ಯಾವ ಹಿಂಜರಿಕೆ ಮಾಡದೆ ಅದರ ಸದುಪಯೋಗ ಪಡೆದುಕೊಳ್ಳಿರಿ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ವೃದ್ಧಾಪ್ಯ ಜೀವನದ ಅವಿಭಾಜ್ಯ ಅಂಗವಾಗಿದ್ದು, ಕೊನೆಗಾಲದಲ್ಲಿ ಯಾರಿಗೂ ಭಾರವಾಗದಂತೆ ಆರೋಗ್ಯ ಕಾಪಾಡಿಕೊಳ್ಳಬೇಕು. ಭಾರತೀಯ ಸಂಸ್ಕೃತಿಯಲ್ಲಿ ನಾಗರಿಕರ ಸ್ಥಾನ ಪ್ರಾಧ್ಯಾನತೆ ಪಡೆದಿದೆ. ಅವರು ತಮ್ಮ ಸಂಪೂರ್ಣ ಜೀವನವನ್ನು ಕುಟುಂಬ, ಸಮಾಜ ಹಾಗು ದೇಶಕ್ಕಾಗಿ ಕಳೆಯುತ್ತಾರೆ. ಅವರು ಆಲದ ಮರದ ಬೇರುಗಳಿದ್ದಂತೆ. ಈ ಬೇರುಗಳಿಲ್ಲದೆ ಕಲ್ಪನೆ ಸಹ ಸಾಧ್ಯವಿಲ್ಲವೆಂದರು.

ಮನುಷ್ಯನ ಕಾಲಘಟ್ಟದಲ್ಲಿ ಬಾಲ್ಯ, ಯೌವ್ವನ, ವೃದ್ಧಾಪ್ಯವೆಂಬ ಮೂರು ಹಂತಗಳಿವೆ. ವೃದ್ಧಾಪ್ಯ ಕಠಿಣವೆಂದು ಭಾವಿಸಬಾರದು. ಜೀವನದ ಒಂದು ಭಾಗ ಅದನ್ನು ತುಂಬಾ ಸಂತೋಷ, ಗೌರವಯುತವಾಗಿ ಘನತೆಯಿಂದ ಸ್ವೀಕರಿಸಿ ಜೀವಿಸುವುದು ಕಲೆಯೆಂದರು.

» ನಾಲ್ಕನೇ ಪುಟದಲ್ಲಿ

# ವಾಲ್ಮೀಕಿ ರಾಮಾಯಣ ನಿಜಕ್ಕೂ ಹೇಳುವುದು ಏನನ್ನು...?

■ ಮನುಷ್ಯನು ರಾಗ–ದ್ವೇಷಗಳಿಲ್ಲದೆ ನೈತಿಕ ಕ್ರಿಯೆಯೊಂದರಲ್ಲಿ ತನ್ನನ್ನು ತೊಡಗಿಸಿಕೊಂಡು, ದೇವರು ವಹಿಸಿದ ಕರ್ಮವನ್ನು ನಿಷ್ಕಾಮಕರ್ಮ ಭಾವದಿಂದ ನಿರ್ವಹಿಸಿದಾಗ ಆತ ಧರ್ಮವಂತನಾಗುತ್ತಾನೆ, ಅವನ ಜೀವನ ಸಾರ್ಥಕವಾಗುತ್ತದೆ ಎಂದು ಹೇಳುವ ಕೃತಿ ಮಹಾಭಾರತ. ಆದರೆ, ರಾಮಾಯಣವು ಒಂದು ಭಾವನಾಪ್ರಧಾನ ಕೃತಿ. ಅದು ದಶರಥನ ದುಃಖದೊಂದಿಗೆ ಆರಂಭಗೊಂಡು, ರಾಮನ ದುಃಖದೊಂದಿಗೆ ಮುಗಿಯುತ್ತದೆ.

ವಾಲ್ಮೀಕಿಯ ಪ್ರಕಾರ, ರಾಮನ ಶ್ರೇಷ್ಠತೆ ಅಡಗಿರುವುದು, ತನ್ನ ಶ್ರೇಷ್ಠ ವೈಯಕ್ತಿಕ ಮೌಲ್ಯಗಳನ್ನು ಸಾರ್ವಜನಿಕ ಆಡಳಿತಕ್ಕೆ ತಂದಿಡುವುದರಲ್ಲಿ. ಅಷ್ಟಕ್ಕೂ, ಇಂಥ ಮೌಲ್ಯಗಳು ಸಾರ್ವಜನಿಕ ಜೀವನವನ್ನು ನಿರ್ದೇಶಿಸಿದಾಗಲೇ ರಾಮರಾಜ್ಯ ಸೃಷ್ಟಿಯಾಗುವುದು. ರಾಮರಾಜ್ಯ ಎಂದರೇನು ಎನ್ನುವುದರ ಕುರಿತಾದ ಒಂದಿಷ್ಟು ಹೊಳಹುಗಳು ರಾಮಾಯಣದಲ್ಲಿ ನಮಗೆ ಅಲ್ಲಲ್ಲಿ ಕಾಣಸಿಗುತ್ತವೆ.

ರಾಮಾಯಣ ಮತ್ತು ಮಹಾಭಾರತ ನಮ್ಮ ಸಂಸ್ಕೃತಿಯ ಎರಡು ಕಣ್ಣುಗಳು. ವೈವಿಧ್ಯಮಯ ಪ್ರಸಂಗಗಳು ಮತ್ತು ಉಪಕಥೆಗಳನ್ನು ಹರವಿಡುವ ಮೂಲಕ ಇವು ಭಾರತೀಯ ಜೀವನ ದೃಷ್ಟಿಯನ್ನು ಹಾಗೂ ಮೌಲ್ಯಗಳ ಚೌಕಟ್ಟನ್ನು ಜಿಜ್ಞಾಸುಗಳ ಮನವರಿಕೆ ಮಾಡಿಕೊಟ್ಟವು ಎನ್ನಬೇಕು.

ಕೇಂದ್ರಭಾಗದಲ್ಲಿ ವಿಭಿನ್ನ ಸಂದೇಶಗಳನ್ನು ಇಟ್ಟುಕೊಂಡು ಸುತ್ತಲೂ ಕಥೆಯನ್ನು ಹೆಣೆದು ರಚಿಸಲ್ಪಟ್ಟಂಥ ಅನನ್ಯ ಕೃತಿಗಳಿವು. ಮಹಾಭಾರತವು ಒಂದು ಬೃಹತ್ ಹಾಸಿನ ಕಥೆಯನ್ನು ಮತ್ತು ಒಂದು ನಾಗರಿಕತೆಯನ್ನು ಅಂತ್ಯವಾಗಿಸುವ ಯುದ್ಧವನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಬದುಕಿನ ಅರ್ಥವಂತಿಕೆಯನ್ನು (ಭಗವದ್ಗೀತೆಯ ಮೂಲಕ) ವಿವರಿಸಿ ಹೇಳುವ ಮಹಾಕಾವ್ಯ. ಮಾನವ ಜೀವನ ಅಸಂಗತವಲ್ಲ, ಅಥವಾ ಅರ್ಥಹೀನವಾದುದಲ್ಲ.

ಮನುಷ್ಯನು ರಾಗ-ದ್ವೇಷಗಳಿಲ್ಲದೆ ನೈತಿಕ ಕ್ರಿಯೆಯೊಂದರಲ್ಲಿ ತನ್ನನ್ನು ತೊಡಗಿಸಿಕೊಂಡು, ದೇವರು ವಹಿಸಿದ ಕರ್ಮವನ್ನು ನಿಷ್ಕಾಮಕರ್ಮ ಭಾವದಿಂದ ನಿರ್ವಹಿಸಿದಾಗ ಆತ ಧರ್ಮವಂತನಾಗುತ್ತಾನೆ, ಅವನ ಜೀವನ ಸಾರ್ಥಕವಾಗುತ್ತದೆ ಎಂದು ಹೇಳುವ ಕೃತಿ ಮಹಾಭಾರತ. ಆದರೆ, ರಾಮಾಯಣವು ಒಂದು ಭಾವನಾಪ್ರಧಾನ ಕೃತಿ. ಅದು ದಶರಥನ ದುಃಖದೊಂದಿಗೆ ಆರಂಭ ಗೊಂಡು, ರಾಮನ ದುಃಖದೊಂದಿಗೆ ಮುಗಿಯುತ್ತದೆ.

ವಿರಹ, ವಿದಾಯ, ಉತ್ಕಟ ಪ್ರೇಮ, ಪ್ರೀತಿ, ತ್ಯಾಗ ಇಂಥ ಮಹೋನ್ನತ ಭಾವನೆಗಳನ್ನು ಕೆರಳಿಸುತ್ತ, ಕಣ್ಣೀರಿನಲ್ಲಿ ಓದುಗನನ್ನು ಮುಳುಗೇಳಿಸುತ್ತ ಓದಿಸಿಕೊಳ್ಳುವ ಕೃತಿ ರಾಮಾಯಣ. ಆದರೆ ಅದರ ಸಾಮಾಜಿಕ/ರಾಜಕೀಯ ಒಳಪಾಠ, ಸಂದೇಶ ಬೇರೆಯೇ ಇದೆ. ಮಹಾನ್ ವ್ಯಕ್ತಿತ್ವವಾದ ಪುರುಷೋತ್ತಮ ರಾಮನನ್ನು ಮುನ್ನೆಲೆಯಲ್ಲಿಟ್ಟುಕೊಂಡು ಕಥೆ ಹೇಳುವ ರಾಮಾಯಣವು, ವೈಯಕ್ತಿಕ, ಸಾಮಾಜಿಕ ಹಾಗೂ ರಾಜಕೀಯ ಮೌಲ್ಯಗಳನ್ನು ಘನೀಕರಿಸಿ ಸಮಾಜಕ್ಕೆ ನೀಡುವ ಕೃತಿ (ಮೌಲ್ಯಗಳ ವ್ಯವಸ್ಥೆ ಎಂದರೆ ಅದು ಭಾವನಾತ್ಮಕ ವಿಷಯವೇ! ಹಾಗಾಗಿಯೇ ಭಾವನಾತ್ಮಕ ಕಥೆಯೊಂದನ್ನು ಹೇಳುತ್ತದೆ ರಾಮಾಯಣ).

ಬಹುಶಃ ರಾಮಾಯಣವು ಹುಟ್ಟಿಕೊಳ್ಳುವುದಕ್ಕೂ ಮೊದಲಿದ್ದ ಕಾಲಘಟ್ಟದಲ್ಲಿ ಕುಟುಂಬ, ದೇಶ, ಅರಸೊತ್ತಿಗೆ, ಅದರ ರಾಜಕೀಯ ಮತ್ತು ನೈತಿಕ ಕರ್ತವ್ಯಗಳು ಇತ್ಯಾದಿ ಪರಿಕಲ್ಪನೆಗಳು ಹುಟ್ಟಿಕೊಂಡಿರಲಿಲ್ಲ. ರಾಜ್ಯಶಾಸ್ತ್ರಜ್ಞ ಥಾಮಸ್ ಹಾಬ್ಸ್ ಹೇಳುವಂತೆ, ಅದು ಸಮಾಜದಲ್ಲಿ ಅರಾಜಕತೆ, ಕ್ರೌರ್ಯ, ಹಿಂಸೆ ವಿಜೃಂಭಿಸಿದ ಸಮಯ.


ಅದು ದೈಹಿಕ ಶಕ್ತಿ ಇದ್ದವನೇ ಅರಸನಾಗಿದ್ದ, ಆತ ಹೇಳಿದ ಮಾತೇ ಕಾನೂನಾಗಿದ್ದ ಕಾಲ. ವೈಯಕ್ತಿಕ, ಸಾಮಾಜಿಕ ಹಾಗೂ ರಾಜಕೀಯ ಬದುಕೆಂಬುದು ಮೌಲ್ಯಗಳಿಂದ ವಂಚಿತವಾಗಿದ್ದ ಕಾಲವದು. ಇಂಥ ಅರಾಜಕತೆಯಿಂದ ಬೇಸತ್ತ ಜನರು ಕ್ರಮೇಣ ತಾವಾಗಿಯೇ ಮುಂದೆ ಬಂದು ಸ್ವಸ್ಥ ಸಮಾಜ ಮತ್ತು ರಾಜಕೀಯ ವ್ಯವಸ್ಥೆಗಳನ್ನು ಸೃಷ್ಟಿಸಿಕೊಂಡರು.

ಈ ಹಿನ್ನೆಲೆಯಲ್ಲೇ ಆದರ್ಶ ವ್ಯಕ್ತಿ/ಕುಟುಂಬ/ದೇಶ ಹೇಗಿರಬೇಕು ಎಂಬ ಚಿಂತನೆಗಳು ಆರಂಭವಾದವು. ಹೀಗೆ ಸಾವಿರಾರು ವರ್ಷಗಳ ಹಿಂದೆಯೇ ಆದರ್ಶ ದೇಶವೊಂದರ (ಅಂದರೆ ರಾಮರಾಜ್ಯದ) ಕುರಿತಾದ ಚೌಕಟ್ಟೊಂದನ್ನು ಹಾಕಿಕೊಟ್ಟ, ಹಾಗೆಯೇ ಮಾನವೀಯವಾದ, ಆದರ್ಶಮಯವಾದ ವೈಯಕ್ತಿಕ, ಸಾಮಾಜಿಕ, ರಾಜಕೀಯ ಮೌಲ್ಯಗಳ ವ್ಯವಸ್ಥೆಯೊಂದನ್ನು ಅದರ ಶ್ರೇಷ್ಠ ನೆಲೆಯಲ್ಲಿ ಕಲ್ಪಿಸಿಕೊಂಡ ಕೃತಿಯೇ ರಾಮಾಯಣ.

ಅಂದಿನ ಕಾಲಘಟ್ಟದ ಗಹನವಾದ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ರಾಮಾಯಣ ಪ್ರಯತ್ನಿಸುತ್ತದೆ. ಉದಾಹರಣೆಗೆ, ಆದರ್ಶ ವ್ಯಕ್ತಿಯೊಬ್ಬ ಹೇಗಿರಬೇಕು? ಆತನ ಕುಟುಂಬ, ಸಮಾಜ ಹೇಗಿರಬೇಕು? ಆದರ್ಶ ಸತಿ–ಪತಿ, ಅಣ್ಣ–ತಮ್ಮಂದಿರ ಸಂಬಂಧ ಹೇಗಿರಬೇಕು? ಗೆಳೆತನ ಹೇಗಿರಬೇಕು? ಆದರ್ಶ ರಾಜ್ಯವೆಂದರೇನು? ಆದರ್ಶ ರಾಜ ಎಂದರೆ ಎಂಥ ಗುಣಗಳನ್ನು ಹೊಂದಿದವನು?– ಬಹುಶಃ ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವ ವಾಲ್ಮೀಕಿಯ ಬಯಕೆಯಿಂದಾಗಿ ರಾಮಾಯಣದ ಕಥಾನಕ (ನರೇಟಿವ್) ಹುಟ್ಟಿಕೊಂಡಿದ್ದು.


ಆದರ್ಶ ಜಗತ್ತೊಂದನ್ನು ಪರಿಕಲ್ಪಿಸುವ ಕನಸು ಮತ್ತು ಆ ಕನಸನ್ನು ಸಮಾಜದ ಮುಂದೆ ಒಂದು ಮಾದರಿಯಾಗಿ ಇಡುವ ಬಯಕೆ ವಾಲ್ಮೀಕಿಗೆ ಇತ್ತು ಎನಿಸುತ್ತದೆ. ಇಂಥದೆಲ್ಲ ಸಾಮಾಜಿಕ ಮತ್ತು ಸೃಜನಶೀಲ ಆಗ್ರಹಗಳ ಪರಿಣಾಮವೇ ರಾಮಾಯಣ.

ರಾಮಾಯಣ ಆರಂಭವಾಗುವುದು ಕೌಟುಂಬಿಕ ಮೌಲ್ಯಗಳ ವ್ಯವಸ್ಥೆಯನ್ನು ಗಟ್ಟಿಗೊಳಿಸಿ ಕೊಳ್ಳುವುದರ ಮೂಲಕ. ಅದು ಶುರುವಾಗುವುದು ಒಂದು ರಾಜಕುಟುಂಬದೊಳಗಿನ ತಲ್ಲಣದ ಕಥೆಯಾಗಿ. ದಶರಥ ಮಹಾರಾಜ ತನ್ನ ಕಿರಿಯ ಹೆಂಡತಿ ಕೈಕೇಯಿಗೆ ಒಂದು ಮಾತು ಕೊಟ್ಟಿದ್ದಾನೆ.



ಮೂಲತಃ ಅವಳೇನೂ ಕೆಟ್ಟವಳಲ್ಲ, ಆದರೆ ಬೇರೆಯವರ ಕುಚೋದ್ಯದಿಂದ ಪ್ರೇರಿತಳಾಗುವ ಅವಳು, ಸಮಯವನ್ನು ಬಳಸಿಕೊಂಡು ಗಂಡನಿಂದ ವರಗಳನ್ನು ಬೇಡುತ್ತಾಳೆ. ಅದೇಂದರೆ– ರಾಮ ಕಾಡಿಗೆ ಹೋಗಬೇಕು, ಮಗ ಭರತ ರಾಜನಾಗಬೇಕು. ಹೀಗೆ ಕೌಟುಂಬಿಕ ರಾಜಕೀಯ ಆರಂಭವಾಗುತ್ತದೆ.

ದಶರಥ ಉಭಯಸಂಕಟದಲ್ಲಿ ಸಿಲುಕುತ್ತಾನೆ. ಆತ ತಾನು ಕೊಟ್ಟ ಮಾತಿಗೆ ವಿರುದ್ಧವಾಗಿ ಹೋಗಲಾರ, ಹಾಗಂತ ರಾಮಚಂದ್ರನನ್ನು ಕಾಡಿಗೆ ಅಟ್ಟಲಾರ. ವಿಷಯ ತಿಳಿದ ರಾಮನು ತಂದೆಯ ಮಾತಿಗೆ ಬದ್ಧನಾಗಿ ನಿಲ್ಲುತ್ತಾನೆ, ಕಾಡಿಗೆ ತೆರಳುತ್ತಾನೆ... ಹೀಗೆ ಒಂದು ಕುಟುಂಬದ ಒಳಗಿನ ತಲ್ಲಣದೊಂದಿಗೆ ಆರಂಭವಾಗುವ ರಾಮಾಯಣವು, ಕುಟುಂಬ ವ್ಯವಸ್ಥೆಯೊಳಗಿನ ಶ್ರೇಷ್ಠ ಮೌಲ್ಯಗಳನ್ನು ಕಲ್ಪಿಸಿಕೊಳ್ಳುತ್ತದೆ.



ಕಥೆಯು ಒಂದು ರಾಜಕುಟುಂಬದ ತಲ್ಲಣದ ಕುರಿತಾಗಿರಬೇಕು ಎಂದು ವಾಲ್ಮೀಕಿ ಯೋಚಿಸಿದ್ದಕ್ಕೆ ಬಹುಶಃ ಕಾರಣಗಳಿವೆ. ಅದೇನೆಂದರೆ– ವೈಯಕ್ತಿಕ/ಕೌಟುಂಬಿಕ ಮತ್ತು ರಾಜಕೀಯ ಮೌಲ್ಯಗಳೆಲ್ಲವೂ ನಿಜವಾಗಿಯೂ ಒಂದೇ, ಬೇರೆ ಆಗಿರಕೂಡದು. ವೈಯಕ್ತಿಕ ಮೌಲ್ಯಗಳ ವ್ಯವಸ್ಥೆಯೇ ರಾಜಕೀಯಕ್ಕೂ ಹರಡಿಕೊಂಡು ಸಮಗ್ರವಾಗಬೇಕು, ಅಷ್ಟೇ.

ಹೀಗಾಗಿ ಒಂದು ಕೌಟುಂಬಿಕ ಕಥೆಯಾಗಿ ಆರಂಭಗೊಳ್ಳುವ ರಾಮಾಯಣ, ಕ್ರಮೇಣ ಸಾರ್ವಜನಿಕವಾಗುತ್ತದೆ. ನೀತಿಯ, ಪ್ರೀತಿಯ ಕಥೆಯಾಗಿಯೇ ಮುಂದುವರಿಯುತ್ತ, ನಂತರ ಒಬ್ಬ ಆದರ್ಶ ರಾಜನ ಮತ್ತು ಆದರ್ಶ ಪ್ರಭುತ್ವದ (ರಾಮರಾಜ್ಯದ) ಪರಿಕಲ್ಪನೆಯನ್ನು ಕಟ್ಟುತ್ತದೆ. ಬಹುಶಃ ಈ ಮೂಲಕ ರಾಮಾಯಣವು ನಮಗೆ ಪುರುಷೋತ್ತಮನಾದ ವ್ಯಕ್ತಿ ಹೇಗಿರಬೇಕು, ಎಂಥ ಮೌಲ್ಯಗಳನ್ನು ಹೊಂದಿರಬೇಕು ಮತ್ತು ಅಂಥ ಪುರುಷೋತ್ತಮನೇ ನಿಜವಾಗಿ ರಾಜನಾಗಬಲ್ಲ/ರಾಜನಾಗಬೇಕಾದ ವ್ಯಕ್ತಿ ಎಂಬುದನ್ನು ಹೇಳುತ್ತದೆ.

ಪುರುಷೋತ್ತಮನ ವ್ಯಕ್ತಿತ್ವವನ್ನು ಸಮಗ್ರವಾಗಿ ಕಟ್ಟುವುದು ರಾಮಾಯಣದ ಗುರಿ. ಇಂಥ ವ್ಯಕ್ತಿಯು ಯುದ್ಧವಿದ್ಯೆಯಲ್ಲಷ್ಟೇ ಪ್ರವೀಣನಲ್ಲ, ಅದು ಆತನಿಗೆ ಬಂದೇ ಬರುತ್ತದೆ. ಶ್ರೀರಾಮನಿಗೆ ದಂಡನೆಯೂ ಚೆನ್ನಾಗಿಯೇ ಗೊತ್ತಿದೆ. ಆತನ ಬಾಣದ ಮುಂದೆ ಯಾರಿಗೂ ನಿಲ್ಲಲಾಗುವುದಿಲ್ಲ, ಆತನಿಗೆ ಸಿಟ್ಟು ಬಂದರೆ ಶರಧಿಯೂ ಹಿಂದೆ ಸರಿಯುತ್ತದೆ. ಆದರೆ, ಶ್ರೇಷ್ಠ ನಾಯಕನಾಗ 'ಬಲ್ಲವನಿಗೆ/ನಾಯಕನಾದವನಿಗೆ ಅಥವಾ ರಾಜನಾದವನಿಗೆ ಇದೇ (ಅಂದರೆ, ಹೆದರಿಸುವ ಅಥವಾ ಕೊಲ್ಲುವ ಶಕ್ತಿಯೇ) ಪ್ರಧಾನವಲ್ಲ.

ಅದು ರಾಜನೊಬ್ಬನ ವ್ಯಕ್ತಿತ್ವದ ಕೊನೆಯ ಅಸ್ತ್ರ. ಆತನಿಗೆ ಈ ಶಕ್ತಿ ಇರುವುದು/ಬೇಕಿರುವುದು– ಅನೀತಿ ಮತ್ತು ಅಧರ್ಮವನ್ನು ದಂಡಿಸಲು ಮಾತ್ರ. ಸೊಕ್ಕಿನಿಂದ ಮೆರೆಯುತ್ತಾ ಅನೀತಿಯಲ್ಲಿ ತೊಡಗಿರುವ ವಾಲಿಯಂಥ ರಾಜನನ್ನು ಅಥವಾ ರಾವಣನಂಥ ರಕ್ಕಸನನ್ನು ಕೊಲ್ಲಲು ಮಾತ್ರ. ರಾಮನಿಗೆ ಕಾಂಟ್ರಾಸ್ಟ್ ಆಗಿ ಅಂದರೆ ವಿರುದ್ಧವಾಗಿ ವಾಲಿ ಮತ್ತು ರಾವಣರನ್ನು ಚಿತ್ರಿಸುವುದರ ಮೂಲಕ ವಾಲ್ಮೀಕಿ ಈ ಮಾತನ್ನು ನಮ್ಮ ಮುಂದೆ ಸ್ಪಷ್ಟವಾಗಿ ಇಡುತ್ತಾರೆ.

ವಾಲಿಗೂ ರಾವಣನಿಗೂ ಘನತೆಯಿದೆ, ಚಕ್ರವರ್ತಿಯಾಗಬಲ್ಲ ಗುಣಗಳಿವೆ, ಜನರನ್ನು ಹತೋಟಿಯಲ್ಲಿರಿಸಬಹುದಾದ ಸಾಮರ್ಥ್ಯವಿದೆ. ಆದರೆ, ಅನೈತಿಕತೆ ಮತ್ತು ದರ್ಪಗಳೇ ಅವರ ವ್ಯಕ್ತಿತ್ವಗಳ ಕೊರತೆ. ಅನೈತಿಕತೆ ಮತ್ತು ದರ್ಪವನ್ನು ಹೊಂದಿದವನು ರಾಜನಾಗಲು ಅರ್ಹನಲ್ಲ. ಬಹುಶಃ ಇದನ್ನು ಹೇಳುವ ಸಲುವಾಗಿಯೇ ವಾಲ್ಮೀಕಿ ಮಹರ್ಷಿಯು ವಾಲಿ ಮತ್ತು ರಾವಣನನ್ನು ರಾಮನಿಂದ ಕೊಲ್ಲಿಸುವುದು.

ರಾಮನ ಗೆಲುವು– ಮೌಲ್ಯದ ಮತ್ತು ಧರ್ಮದ ಗೆಲುವು. ಹೀಗೆ ವಾಲ್ಮೀಕಿಯ ಪ್ರಕಾರ, ರಾಜನೊಬ್ಬನಿಗೆ ಇರಬೇಕಾದ ಮೂಲಭೂತ ಅರ್ಹತೆಯು ಶಕ್ತಿಯೊಂದೇ ಅಲ್ಲ; ಅದಕ್ಕಿಂತ ದೊಡ್ಡದು ನೈತಿಕ ಅರ್ಹತೆ. ಕ್ಷಮಾಗುಣ, ಅನುಕಂಪ, ಕರುಣೆ ಮತ್ತು ವಾತ್ಸಲ್ಯದಂಥ ಗುಣಗಳನ್ನು ಹೊಂದಿರುವ ಮನಸ್ಸು ಹಾಗೂ ಹೃದಯ ಆ ಅರ್ಹತೆಯ ಘಟಕಾಂಶಗಳು. ಈ ಎಲ್ಲ ಅಂಶಗಳ ಆಗರವೇ ಆಗಿದ್ದ ಶ್ರೀರಾಮ, ಚಿಕ್ಕಮ್ಮ ಕೈಕೇಯಿ ತನಗೆ ದ್ರೋಹ ಬಗೆದಳು ಎಂದು ಭಾವಿಸುವುದೇ ಇಲ್ಲ. ಆಕೆಯ ಮೇಲಿದ್ದ ಅವನ ಗೌರವ ಎಳ್ಳಷ್ಟೂ ಕಡಿಮೆಯಾಗುವುದಿಲ್ಲ. ಹಾಗೆಯೇ, ಭರತನನ್ನು ಕುತಂತ್ರಿ ಎಂದೂ ರಾಮ ಭಾವಿಸುವುದಿಲ್ಲ. ರಾಮನ ವ್ಯಕ್ತಿತ್ವದ ಈ ಗುಣವೇ ಭರತನನ್ನು ಕರಗಿಸಿಬಿಡುತ್ತದೆ.

ಮರ್ಯಾದಾ ಪುರುಷೋತ್ತಮ ರಾಮನ ಇನ್ನೊಂದು ಗುಣವೆಂದರೆ ಜಿತೇಂದ್ರಿಯತ್ವ. ಏಕಪತ್ನೀ ವ್ರತಸ್ಥನಾದ ರಾಮನ ಈ ಶ್ರೇಷ್ಠಗುಣವನ್ನು ನಾವು ಅಂದಿನ ಕಾಲಘಟ್ಟದ ಕನ್ನಡಕದ ಮೂಲಕ ಅವಲೋಕಿಸಬೇಕು. ಬಹುಶಃ ರಾಮಾಯಣದ ಕಾಲಘಟ್ಟಕ್ಕೂ ಮುನ್ನ ಇಂಥ ಪರಿಕಲ್ಪನೆ ಇದ್ದಿರಲಿಲ್ಲ. ಆಗ ಬಹುಪತ್ನಿತ್ವವು ದೊಡ್ಡ ವಿಷಯವೇ ಆಗಿರಲಿಲ್ಲ.

ಇಂಥ ವ್ಯವಸ್ಥೆಯಲ್ಲಿ ಮಹಿಳೆಯರ ಗೋಳು ನೋಡಿದ ವಾಲ್ಮೀಕಿ ಅದೇ ಕಾರಣಕ್ಕೆ ಏಕಪತ್ನೀವ್ರತಸ್ಥ ಎನ್ನುವುದನ್ನು ಒಂದು ಶ್ರೇಷ್ಠ ಮೌಲ್ಯವನ್ನಾಗಿರಿಸಿರಲು ಸಾಧ್ಯವಿದೆ. ಆ ಕಾಲಘಟ್ಟದ ಹಿನ್ನೆಲೆಯಲ್ಲಿ, ಬಲಿಷ್ಠನಾಗಿದ್ದು ಕೂಡ ಜಿತೇಂದ್ರಿಯನಾಗಿರುವುದು ರಾಜನೊಬ್ಬನ ಶ್ರೇಷ್ಠತೆ ಎಂಬುದನ್ನು ರಾಮಾಯಣದ ಮೂಲಕ ವಾಲ್ಮೀಕಿ ನಮಗೆ ಹೇಳುತ್ತಾರೆ. ರಾಮ ಮತ್ತು ಸೀತೆಯರ ನಡುವಿನ ಸಂಬಂಧವನ್ನು ವಾಲ್ಮೀಕಿಯು ಆದರ್ಶಮಯವಾಗಿಸುವುದು ಕೂಡ ನೈತಿಕ ವ್ಯವಸ್ಥೆಯನ್ನು ಕಟ್ಟಬೇಕೆಂಬ ತಮ್ಮ ಆಸೆಯ ಹಿನ್ನೆಲೆಯಲ್ಲಿಯೇ!

ವಾಲ್ಮೀಕಿಯ ಪ್ರಕಾರ, ಸಾರ್ವಭೌಮನಾಗಿ ರಾಮನ ಶ್ರೇಷ್ಠತೆ ಅಡಗಿರುವುದು, ತನ್ನ ಶ್ರೇಷ್ಠ ವೈಯಕ್ತಿಕ ಮೌಲ್ಯಗಳನ್ನು ಸಾರ್ವಜನಿಕ ಆಡಳಿತಕ್ಕೆ ತಂದಿಡುವುದರಲ್ಲಿ. ಅಷ್ಟಕ್ಕೂ, ಇಂಥ ಮೌಲ್ಯಗಳು ಸಾರ್ವಜನಿಕ ಜೀವನವನ್ನು ನಿರ್ದೇಶಿಸಿದಾಗಲೇ ರಾಮರಾಜ್ಯ ಸೃಷ್ಟಿಯಾಗುವುದು. ರಾಮರಾಜ್ಯ ಎಂದರೇನು ಎನ್ನುವುದರ ಕುರಿತಾದ ಒಂದಿಷ್ಟು ಹೊಳಹುಗಳು ರಾಮಾಯಣದಲ್ಲಿ ನಮಗೆ ಅಲ್ಲಲ್ಲಿ ಕಾಣಸಿಗುತ್ತವೆ. ರಾಜ ಎನಿಸಿಕೊಂಡವನು ಸೂಕ್ಷ್ಮ ಗುಣದವನಾಗಿದ್ದು ಜನರ ಭಾವನೆಗಳಿಗೆ ಬೆಲೆ ನೀಡುವವನಾಗಿರಬೇಕು, ನ್ಯಾಯವಂತನಾಗಿರಬೇಕು, ಪರಿಶುದ್ಧನಾಗಿರಬೇಕು. ಅಷ್ಟೇ ಅಲ್ಲ, ವೈಯಕ್ತಿಕತೆಯನ್ನು ಮೀರಿನಿಂತವನಾಗಿರಬೇಕು ಕೂಡ.

ರಾಮನು ಸೀತೆಯನ್ನು ಅಗ್ನಿಪ್ರವೇಶಕ್ಕೆ ತೊಡಗಿಸಿದ, ನಂತರ ಅವಳನ್ನು ಕಾಡಿಗಟ್ಟಿದಂಥ ಸನ್ನಿವೇಶಗಳನ್ನು ವಾಲ್ಮೀಕಿ ನಮ್ಮ ಮುಂದಿಡುವುದರ ಹಿಂದಿನ ಕಾರಣ ಬಹುಶಃ ಇದೇ ಇರಬೇಕು. ರಾಮಾಯಣದ ಕೊನೆಯಲ್ಲಿ ಲಕ್ಷ್ಮಣನಿಗೆ ಪ್ರಾಣದಂಡನೆ ವಿಧಿಸುವ ಸನ್ನಿವೇಶ ಬಂದು ನಿಂತಾಗ ರಾಮನು ಆಯ್ದುಕೊಳ್ಳುವುದು ನೈತಿಕತೆಯನ್ನು. ರಾಮರಾಜ್ಯ ಎಂಬುದು ಇಂಥ ಕಠೋರ ನೈತಿಕತೆಯ ಮೇಲೆ ಕಟ್ಟಲ್ಪಟ್ಟಿದ್ದು.

ಹೀಗೆ ವಾಲ್ಮೀಕಿಯ ರಾಮಾಯಣವು ತುಂಬಾ ಭಾವನಾತ್ಮಕವಾಗಿ ಹೆಣೆಯಲ್ಪಟ್ಟ ಕಥೆಯಾದರೂ, ಮೂಲದಲ್ಲಿ ಅದು ಒಂದು ಆದರ್ಶ ಪ್ರಭುತ್ವ ಹೇಗಿರಬಹುದು ಎನ್ನುವ ಕುರಿತಾದ ಕಥೆಯನ್ನೂ ಹೇಳುತ್ತದೆ. ಹಾಗೆಯೇ, ರಾಜಕೀಯ ವ್ಯವಸ್ಥೆಯ ಶ್ರೇಷ್ಠತೆಯನ್ನು ವ್ಯಾಖ್ಯಾನಿಸಿದ ಮೊದಲ ಜಾಗತಿಕ ಕೃತಿಯೂ ರಾಮಾಯಣವೇ...

– **ಪ್ರೊ.ಆರ್.ಜಿ.**ಹೆಗಡೆ

## 05–10–2025 ದಿನ ಭವಿಷ್ಯ

**ಮೇಷ:** ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ನೀವು ನಿಮ್ಮ ಕಳೆದ ಸಮಯದಲ್ಲಿ ಬಹಳಷ್ಟು ಹಣವನ್ನು ಖರ್ಚುಮಾಡಿದ್ದಿರಿ ಇದರ ತೊಂದರೆ ನೀವು ಇಂದು ಅನುಭವಿಸಬೇಕಾಗಬಹುದು. ಇಂದು ನಿಮಗೆ ಹಣದ ಅಗತ್ಯವಿರಬಹುದು ಆದರೆ ಅದು ನಿಮಗೆ ದೊರೆಯುವುದಿಲ್ಲ.

**ವೃಷಭ:** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ. ದೂರದ ಸ್ಥಳದ ಸಂಬಂಧಿಗಳು ಇಂದು ನಿಮ್ಮನ್ನು ಸಂಪರ್ಕಿಸಬಹುದು. ಪ್ರೀತಿಯ ಭಾವಪರವಶತೆಯನ್ನು ಅನುಭವಿಸಲು ಯಾರಾದರೂ ದೊರಕಬಹುದು.

**ಮಿಥುನ:** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

**ಕರ್ಕಾಟಕ:** ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಸಾಮಾಜಿಕ ಕಾರ್ಯಗಳಿಗೆ ಹಾಜರಾಗಲು ಅವಕಾಶಗಳಿರಬಹುದು ಹಾಗೂ ಇದು ನಿಮ್ಮನ್ನು ಪ್ರಭಾವಿ ವ್ಯಕ್ತಿಗಳ ಜೊತೆ ನಿಕಟ ಸಂಪರ್ಕ ಹೊಂದುವಂತೆ ಮಾಡಬಹುದು.

**ಸಿಂಹ:** ನೀವು ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ವಿಶೇಷವಾಗಿ ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡದೇ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ.

**ಕನ್ಯಾ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಇಂದು ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು. ಹಳೆಯ ಸ್ನೇಹಿತರು ಬೆಂಬಲ ನೀಡುತ್ತಾರೆ ಮತ್ತು ಉಪಯುಕ್ತವಾಗಿರುತ್ತಾರೆ.

**ತುಲಾ:** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ವೃಶ್ಚಿಕ:** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ವ್ಯಾಪಾರವನ್ನು ಬಲಪಡಿಸಲು ಇಂದು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದಕ್ಕಾಗಿ ನಿಮ್ಮ ಆಪ್ತ ನಿಮಗೆ ಆರ್ಥಿಕವಾಗಿ ಸಹಾಯ ಮಾಡಬಹುದು.

**ಧನು:** ನಿಮ್ಮ ಧೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮ ವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ಇಂದು ಸಾಲಗಾರನು ನಿಮಗೆ ಹೇಳದೆ ನಿಮ್ಮ ಖಾತೆಗೆ ಹಣವನ್ನು ಸೇರಿಸಬಹುದು. ಇದರ ಬಗ್ಗೆ ತಿಳಿದು ನೀವು ಆಶ್ಚರ್ಯಚಕಿತರಾಗಬಹುದು. ಮತ್ತು ಸಂತೋಷವು ಪಡೆಯಬಹುದು. ಸ್ನೇಹಿತರು ಹಾಗೂ ಕುಟುಂಬದ ಸದಸ್ಯರೊಡನೆ ಒಂದು ಸಂಜೆಯನ್ನು ಆಯೋಜಿಸಿ.

**ಮಕರ:** ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ – ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಮಕ್ಕಳು ನಿಮಗೆ ಮನೆಕೆಲಸಗಳನ್ನು ಮಾಡಲು ಸಹಾಯ ಮಾಡುತ್ತಾರೆ.

**ಕುಂಭ:** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಹಣದ ಕೊರತೆ ಇಂದು ನಿಮ್ಮ ಮನೆಯಲ್ಲಿ ಅಪಶ್ರುತಿಗೆ ಕಾರಣವಾಗಬಹುದು. ಅಂತಹ ಪರಿಸ್ಥಿತಿಯಲ್ಲಿ ನೀವು ನಿಮ್ಮ ಮನೆಯವರೊಂದಿಗೆ ಯೋಚಿಸಿ ಅರ್ಥಮಾಡಿಕೊಂಡು ಮಾತನಾಡಿ ಮತ್ತು ಅವರಿಂದ ಸಲಹೆಯನ್ನು ತೆಗೆದುಕೊಳ್ಳಿ.

**ಮೀನ:** ಆರೋಗ್ಯ ಚೆನ್ನಾಗಿರುತ್ತದೆ. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸ್ನೇಹಿತರ ಸಂಗ ಆರಾಮ ಒದಗಿಸುತ್ತದೆ. ನಿಮ್ಮ ಪ್ರೀತಿಯ ಕಥೆ ಇಂದು ಒಂದು ಹೊಸ ತಿರುವು ತೆಗೆದುಕೊಳ್ಳಬಹುದು, ಇಂದು ನಿಮ್ಮ ಸಂಗಾತಿ ಮದುವೆಯ ಬಗ್ಗೆ ನಿಮ್ಮೊಂದಿಗೆ ಮಾತನಾಡಬಹುದು.

## ಕಾಂಚಾಣದ ಸದ್ದು

ಲೋಕಾಪುರದ ಗ್ರಾಮದಲ್ಲಿ ಮಲ್ಲಯ್ಯ ಒಳ್ಳೆಯ ದುಡಿಮೆ ಮಾಡಿ ಇತಿ ಮಿತಿಯಲ್ಲಿ ವ್ಯವಹಾರ ಮಾಡಿ ಹಣ ಉಳಿತಾಯ ಮಾಡುತ್ತಾ ಬಂದನು. ಇದರಿಂದ ಮಲ್ಲಯ್ಯ ಗ್ರಾಮದಲ್ಲಿ ಅತ್ಯಂತ ಶ್ರೀಮಂತ ವ್ಯಕ್ತಿಯಾದ. ಶ್ರೀಮಂತನಾದರೂ ದುಡಿಮೆಯೇ ದೇವರು ಎಂದು ಮೈ ಮುರಿದು ಜಮೀನಿನಲ್ಲಿ ದುಡುಮೆ ಮಾಡುತ್ತಿದ್ದ. ಒಳ್ಳೆಯ ಬಟ್ಟೆಯನ್ನು ದರಿಸದೆ ಸಾಮಾನ್ಯ, ಸರಳ ಜೀವನ ಸಾಗಿಸುತ್ತಿದ್ದ. ಇವನಲ್ಲಿನ ಸಂಪತ್ತಿನ ಸಂಗ್ರಹ, ದುಡ್ಡು ನೋಡಿ ಜನರು ಕೈಮುಗಿದು, ಮೇಲೆ ಬಿದ್ದು ಮಾತನಾಡಿಸಲು ಪ್ರಾರಂಬಿಸಿದರು. ಹೋದಲ್ಲಿ ಬಂದಲ್ಲಿ ಅಲ್ಲಿ ಬನ್ನಿ, ಇಲ್ಲಿ ಬನ್ನಿ ಅಂತಾ ಬಹಳ ಗೌರವಿಸಲು ಹತ್ತಿದರು. ಗ್ರಾಮದಲ್ಲಿ ಒಳ್ಳೆಯ ಬಟ್ಟೆ ಹಾಕಿಕೊಂಡು ಹಿರಿಯತನ ಮಾಡುವವರನ್ನು, ಜ್ಞಾನವಂತರನ್ನು, ಬಲಿಷ್ಟ ದೇಹ ಹೊಂದಿದವರನ್ನು ಸರಿಸಿ ಮಲ್ಲಯ್ಯನಿಗೆ ವೇದಿಕೆಯಲ್ಲಿ ಜಾಗ ನೀಡಿದರು. ಅವನ ಸುತ್ತಲೂ ಜನರು ಸುತ್ತಾಡಲು ಪ್ರಾರಂಬಿಸಿ ಹೊಗಳಿದರು. ಇದರಿಂದ ಮಲ್ಲಯ್ಯನಿಗೆ ಸೋಜಿಗವಾಯಿತು. ನನಗೆ ಇತ್ತೀಚೆಗೆ ಏಕೆ ಜನರು ಇಷ್ಟು ಗೌರವಿಸುತ್ತಿದ್ದಾರೆ ಅಂತಾ ತಿಳಿಯದಾಯಿತು.

ನನಗೆ ಜನರು ಬಹಳ ಗೌರವ ಕೊಡುತ್ತಾರೆ. ನಾನು ಇಲ್ಲಾ ಅಂದ್ರೆ ಇಲ್ಲಿ ಏನು ಇಲ್ಲಾ ಎನ್ನುವ ಅಹಂ ಮಲ್ಲಯ್ಯನಿಗೆ ಬಂದಿತು. ಸಾರ್ವಜನಿಕ ಕಾರ್ಯಕ್ರಮಗಳಿಗೆ ಮನ ಬಂದಂತೆ ಮಿತಿ ಹಣ ನೀಡ ತೊಡಗಿದ. ಒಳ್ಳೆಯ ದುಬಾರಿ ಬೆಲೆಯ ಬಟ್ಟೆ ತೊಟ್ಟಿಕೊಂಡು, ಹಿಂಬಾಲಕರನ್ನು ಕರೆದುಕೊಂಡು ಹೋಟೆಲ್, ಬಾರ್, ಪ್ರವಾಸ ಅಂತಾ ತಿರುಗಲು ಪ್ರಾರಂಬಿಸಿದ. ದಿನೇ ದಿನೇ ದುಡಿದು ಸಂಗ್ರಹಿಸಿದ ಸಂಪತ್ತು ಕಳೆದು ಹೋಗುತ್ತಿತ್ತು. ಹೀಗೆ ಖರ್ಚು ಹೆಚ್ಚಾಯಿತು. ದುಡಿಮೆ ಕಡೆ ಗಮನ ಕಡಿಮೆಯಾಯಿತು. ಇದರಿಂದ ಮನೆಯಲ್ಲಿದ್ದ, ಬ್ಯಾಂಕಿನಲ್ಲಿದ್ದ ಹಣ, ಎಪ್ ಡಿ ಕಾಲಿಯಾಯಿತು. ದೊಡ್ಡತನ ತೋರಿಸಲು ಬೇರೆ ಬೇರೆ ಕಡೆ ಸಾಲ ಮಾಡಿ ದೊಡ್ಡ ವ್ಯಕ್ತಿ ರೀತಿ ತೋರಿಸಿಕೊಂಡ. ಇದರಿಂದ ಮನೆಯಲ್ಲಿನ ಆಬರಣ, ವಾಹನ, ಹೊಲ ಗದ್ದೆ ಎಲ್ಲವನ್ನೂ ಮಾರಬೇಕಾಯಿತು. ಆದರೂ ಒಳ್ಳೆಯ ಬಟ್ಟೆ ತೊಟ್ಟುಕೊಂಡು ನಕಲಿ ಬಂಗಾರ ಹಾಕಿಕೊಂಡು ಗ್ರಾಮದಲ್ಲಿ ಸಂಚಾರ ಮಾಡಿದ. ಸಾಲಗಾರರು ಮನೆಗೆ ಬಂದು ಸಾಲ ಮುಟ್ಟಿಸುವಂತೆ ಹೇಳಿ ಹೋದರು. ಇದರಿಂದ ನನ್ನ ದೊಡ್ಡತನಕ್ಕೆ ದಕ್ಕೆ ಬರುತ್ತದೆ ಎಂದು ಅವರಿಗೆ ವಿನಂತಿ ಮಾಡಿ, ಬೇಗ ಸಾಲ ತೀರಿಸುತ್ತೇನೆ ಎಂದು ಹೇಳಿ ಕಳಿಸಿದ. ಮಲ್ಲಯ್ಯ ದೊಡ್ಡ ಸಾಲಗಾರ, ಇವನ ಹತ್ತಿರ ದುಡ್ಡು ಇಲ್ಲಾ ಅಂತಾ ಜನರಿಗೆ ತಿಳಿಯಿತು. ಇದರಿಂದ ಹಿಂದೆ ಅಡ್ಡಾಡುವ ಜನರ ಸಂಖ್ಯೆ ಕಡಿಮೆಯಾಗುತ್ತಾ ಬಂದಿತು. ಆತ್ಮೀಯವಾಗಿ ಮೇಲೆ ಬಿದ್ದು ಮಾತನಾಡುವವರು ಇವನನ್ನು ನೋಡಿದರೆ ನಮ್ಮನ್ನೆ ಸಾಲ ಕೇಳುತ್ತಾನೆ ಅಂತಾ ದೂರ ಸರಿದು ಹೊರಟರು.

ಕೆಲವು ತಿಂಗಳ ನಂತರ ಮನೆಯಲ್ಲಿ ಎಲ್ಲಾ ಸಂತೆ, ದಾನ್ಯ ಕಾಲಿಯಾದ ಮೇಲೆ ಮಲ್ಲಯ್ಯನ ಹೆಂಡತಿ ಓಣಿಯಲ್ಲಿ ಕಡ ಕೇಳಿದಳು ಯಾರು ಕೊಡಲಿಲ್ಲಾ. ತಡೆದು ತಡೆದು ಮಲ್ಲಯ್ಯನ ಹೆಂಡತಿ ಗ್ರಾಮದಲ್ಲಿ ಕೂಲಿಗೆ ಹೋದರೆ ಮರಿಯಾದೆ ಕಮ್ಮಿಯಾಗುತ್ತದೆ ಎಂದು ನಗರಕ್ಕೆ ಕೂಲಿಗೆ ಹೊರಟಳು. ಜನರು ಗೌರವದಿಂದ ಮಲ್ಲಯ್ಯ ಅನ್ನುವುದನ್ನು ಬಿಟ್ಟು ಮಲ್ಲಪ್ಪ ಅಂತ ಕರೆದರು. ಮತ್ತೆ ಕೆಲವು ದಿನದ ನಂತರ ಮಲ್ಯಾ ಅಂತಾ ಕರೆದರು. ಮತ್ತೆ ಬರು ಬರುತ್ತಾ ಕಸಕ್ಕೆ ಬೆಲೆ ನೀಡುವುದಕ್ಕಿಂತ ಕಡಿಮೆ ಬೆಲೆ ನೀಡಿದರು. ಇದರಿಂದ ಮಲ್ಲಯ್ಯನಿಗೆ ಪಾಪ ಪ್ರಜ್ಞೆಯಾಗಿ ವಿಚಾರಿಸತೊಡಗಿದ. ನಾನು ಅಂದು ಒಳ್ಳೆಯ ಬಟ್ಟೆ ಹಾಕಿಕೊಳ್ಳದಿದ್ದರೂ ನನ್ನನ್ನು ಗೌರವಿಸುತ್ತಿದ್ದರು. ನನ್ನ ಹಿಂದೆ ಜನ ಬರುತ್ತಿದ್ದರು. ಆದರೆ ಈಗ ಒಳ್ಳೆಯ ಬಟ್ಟೆ ದರಿಸಿದರೂ ಜನರು ನನ್ನ ಹಿಂದೆ ಬರುತ್ತಿಲ್ಲಾ. ಹೋಗಲಿ ಮಾತನಾಡಿಸಲೂ ಹಿಂಜರಿಯುತ್ತಿದ್ದಾರೆ ಅಂತಾ ಅನಿಸಿತು. ಇದಕ್ಕೆ ಕಾರಣ ಹುಡುಕುತ್ತಾ ಹೊರಟ. ಮಲ್ಲಯ್ಯ ಹಿಂದಿನ ಸಂಪತ್ತು ಸ್ಥಿತಿ ಗತಿ ನೆನಪಿಸಿಕೊಂಡ. ಈಗಿನ ಸ್ಥಿತಿಗತಿ ನೋಡಿಕೊಂಡ. ಮಲ್ಲಯ್ಯನಿಗೆ ನಿದಾನವಾಗಿ ತಿಳಿಯಿತು. ಈ ಗೌರವ, ಘನತೆ, ಪ್ರತಿಷ್ಟೆ ಮತ್ತು ಜನರು ಹಿಂದೆ ಬರಲು ಅಂದು ತನ್ನಲ್ಲಿದ್ದ ಹಣ ಕಾರಣ ಎನ್ನುವುದು ಅರಿವಾಯಿತು.

ಮಲ್ಲಯ್ಯ ಎಲ್ಲಾ ಬಿಟ್ಟು ಮೊದಲಿನ ತರ ಒಳ್ಳೆಯ ದುಡುಮೆ ಮಾಡಲು ಪ್ರಾರಂಬಿಸಿದ. ಬುದ್ದಿವಂತಿಕೆಯಿಂದ ಲಾಭ ಗಳಿಸಿದ. ಜಮೀನು, ಗದ್ದೆ ಮತ್ತೆ ಖರೀದಿಸಿದ. ವಾಹನ, ಐಶಾರಾಮಿ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಬಂದ. ಒಳ್ಳೆಯ ಲಾಭದ ವ್ಯಾಪಾರ ಮಾಡಿ, ಅತ್ಯುತ್ತಮ ಬೆಳೆ ಬೆಳೆದು ಲಾಭಗಳಿಸಿ ಅಪಾರ ಹಣ ಬ್ಯಾಂಕಿನಲ್ಲಿ ಇಟ್ಟ. ಹೆಂಡತಿ ಮಕ್ಕಳಿಗೆ ಬಂಗಾರ ಬೆಳ್ಳಿ ಕೊಡಿಸಿದ. ಮಲ್ಲಯ್ಯ ಮತ್ತೆ ಆಗರ್ಭ ಸಿರಿವಂತನಾದ. ಆಗ ಜನರು ಮತ್ತೆ ಬುದ್ದಿ ಅಂತಾ ಮನೆಯ ಮುಂದೆ ಬಂದು ನಿಲ್ಲಲು ಪ್ರಾರಂಬಿಸಿದರು. ಆಗ ಮಲ್ಲಯ್ಯನಿಗೆ ಅನುಭವದ ಕಟು ಸತ್ಯ ತಿಳಿದಿತ್ತು. ನಮ್ಮ ಹತ್ತಿರ ಕಾಂಚಾಣದ ಸದ್ದು ಕೇಳಿದರೆ ಜನರು ಒಂದು ತರಾ ಇರುತ್ತಾರೆ. ಅದೆ ಕಾಂಚಾಣ ಸದ್ದು ನಿಲ್ಲಿಸಿದರೆ ಒಂದು ತರಾ ಇರುತ್ತಾರೆ ಎನ್ನುವ ಸತ್ಯ ತಿಳಿದ. ಮಲ್ಲಯ್ಯ ಶ್ರೀಮಂತನಾದರೂ ಸಾಮಾನ್ಯ ವ್ಯಕ್ತಿಯಂತೆ ಬದುಕುವ ಜೀವನ ಆಯ್ಕೆ ಮಾಡಿಕೊಂಡು ಜೀವನ ಸಾಗಿಸಿದ.



– **ಶರೀಪ** ಗಂಚಿಗಳ್ಳಿ.

## ಭಾರತ ಪಡೆದ 1947ರ ಸ್ವಾತಂತ್ರ್ಯ ಹೀಗೂ ಉಪಯೋಗವಾಗುತ್ತಿದೆ...



ಮತದಾರನಿಗೆ ಹಣ–ಹೆಂಡ ಸೀರೆ ಪಂಚೆ ಪಡೆದು ಯಾರಿಗೆ ಬೇಕಾದರೂ ಮತ ಹಾಕುವ ಸ್ವಾತಂತ್ರ್ಯ ದೊರೆತಿದೆ. ಹಾಗೆಯೇ ಗೆದ್ದ ಅಭ್ಯರ್ಥಿ ಯಾವ ಪಕ್ಷದವರು ಹೆಚ್ಚು ದುಡ್ಡು ಕೊಡುತ್ತಾರೋ ಅಥವಾ ಮಂತ್ರಿಗಿರಿ ಕೊಡುತ್ತಾರೋ ಅವರ ಪಕ್ಷಕ್ಕೆ ಹಾರುವ ಸ್ವಾತಂತ್ರ್ಯ ಉಳಿಸಿಕೊಂಡಿದ್ದಾರೆ. ಹಾಗೆಯೇ ಮಂತ್ರಿಯಾದವನು ತನ್ನ ಕುಟುಂಬದ ಏಳು ತಲೆಮಾರಿಗಾಗುವಷ್ಟು ಸಂಪತ್ತು ಗಳಿಸುವ ಸ್ವಾತಂತ್ರ್ಯವೂ ಸಿಕ್ಕಿದೆ. ಟಿವಿ, ಫೇಸ್ ಬುಕ್, ಎಕ್ಸ್, ವಾಟ್ಸ್ ಆಪ್ ಮುಂತಾದ ಸೋಷಿಯಲ್ ಮೀಡಿಯಾಗಳಲ್ಲಿ ಯಾರನ್ನು ಬೇಕಾದರೂ ಅವರ ವೈಯಕ್ತಿಕ ನೆಲೆಯಲ್ಲಿಯೂ ಬಾಯಿಗೆ ಬಂದಂತೆ ಮಾತನಾಡುವ ಸ್ವಾತಂತ್ರ್ಯವೂ ದೊರೆತಿದೆ. ಸಾಹಿತಿಗಳು – ಕಲಾವಿದರು – ಹೋರಾಟಗಾರರು – ಮಠಾಧೀಶರು ಮುಂತಾದ ಜನಪ್ರಿಯರೂ ಕೂಡ ತಮ್ಮ ಸ್ಥಾನ ಮತ್ತು ಜವಾಬ್ದಾರಿಯ ಅರಿವಿಲ್ಲದೆ ಜನರ ಮಧ್ಯೆ ಬೆಂಕಿಹಚ್ಚುವ ಸಂಪೂರ್ಣ ಸ್ವಾತಂತ್ರ್ಯ ಗಳಿಸಿಕೊಂಡಿದ್ದಾರೆ. ಸಿಕ್ಕ ಸಿಕ್ಕ ವಿಷಯಗಳಿಗೆ ಇಡೀ ಭಾರತವನ್ನೇ ಬಂದ್ ಮಾಡಿ ಮನಸ್ಸೋ ಇಚ್ಛೆ ಗಲಭೆ ಮಾಡುವ ಮತ್ತು ಮಾಡಿಸುವ ಸ್ವಾತಂತ್ರ್ಯವೂ ನಮಗಿದೆ.

ಕೆಲವು ಕೊಲೆ – ಅತ್ಯಾಚಾರ – ಭ್ರಷ್ಟಾಚಾರ – ವಂಚನೆ – ಕಳ್ಳತನವನ್ನು ಮಾಡಿಯೂ ಪೋಲೀಸರಿಂದಲೋ ತಪ್ಪಿದರೆ ನ್ಯಾಯಾಲಯದಿಂದಲೋ ಬಚಾವ್ ಆಗಿ ಬರುವ ಸ್ವಾತಂತ್ರ್ಯವೂ ಇದೆ. ದಾರಿಯಲ್ಲಿ ಓಡಾಡುವ ಹೆಣ್ಣುಮಕ್ಕಳನ್ನು ಅಸಹ್ಯವಾಗಿ ಚುಡಾಯಿಸಿ ಭಾರತ್ ಮಾತಾಕಿ ಜೈ ಎನ್ನುವ ಸ್ವಾತಂತ್ರ್ಯವೂ ನಮಗಿದೆ. ತಾವು ಹುಟ್ಟಿದ ಜಾತಿ ಹೇಳಿಕೊಂಡು ನಮಗೇಗೆಬೇಕೋ ಹಾಗೆ ಅದರ ಲಾಭ ಪಡೆಯುವ ಸ್ವಾತಂತ್ರ್ಯವೂ ನಮಗಿದೆ. ಇದೆಲ್ಲದರ ನಡುವೆ ಬ್ರಿಟೀಷರ ಕಾಲದಲ್ಲಿ ಇದ್ದ ಆ ಗುಲಾಮಿ ಮನೋಭಾವ ಮಾತ್ರ ಬದಲಾಗಿಲ್ಲ. ಸ್ವತಂತ್ರ ಚಿಂತನೆ – ಕ್ರಿಯಾತ್ಮಕ ಬೆಳವಣಿಗೆ – ಪ್ರಬುದ್ಧ ಮನಸ್ಥಿತಿ ಮಾತ್ರ ನಮಗೆ ದಕ್ಕಲಿಲ್ಲ. ಆಧುನಿಕ ಯುವಕರಂತೂ ಯಾವುದೋ ಸಿದ್ಧಾಂತಕ್ಕೋ, ಇಲ್ಲ ಯಥೇಚ್ಚ ಹಣಕ್ಕೋ ಅಥವಾ ತಂತ್ರಜ್ಞಾನಕ್ಕೋ ತಮ್ಮನ್ನು ಮಾರಿಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ, ಸ್ವಾತಂತ್ರ್ಯವೆಂದರೆ ನಮಗಿಷ್ಟ ಬಂದಂತೆ ಆಡುವ ಸ್ವೇಚ್ಛಾಚಾರ ಅಥವಾ ಸ್ವಾತಂತ್ರ್ಯವೆಂದರೆ ಇನ್ನೊಬ್ಬರಿಗೆ ಮಾರಿಕೊಳ್ಳುವ ಗುಲಾಮಿತನ. ಗಾಂಧಿಯನ್ನು ಕೊಂದದ್ದು ಗೋಡ್ಸೆ ಮಾತ್ರವಲ್ಲ ಗಾಂಧಿ ತತ್ವಗಳನ್ನು ಸಮಾಧಿ ಮಾಡಿದ ದೇಶದ ಭವಿಷ್ಯ! ಪಿಕ್ಚರ್ ಅಭೀ ಬಾಕಿ ಹೈ.

– **ವಿವೇಕಾನಂದ. ಎಚ್. ಕೆ.,** ಬೆಂಗಳೂರು

## ಬಾಳೆಹಣ್ಣು ಮತ್ತು ಅದರ ಉಪಯೋಗಗಳು

ನಮ್ಮ ಸನಾತನ ಧರ್ಮದಲ್ಲಿ ಹಣ್ಣುಗಳ ಪೈಕಿ ಬಾಳೆಹಣ್ಣನ್ನು ಸರ್ವಶ್ರೇಷ್ಠ ಎಂದು ನಂಬಿದ್ದೇವೆ. ಏಕೆಂದರೆ ಬಾಳೆಹಣ್ಣು ಯಾವುದೇ ಪೂಜೆ ಪುನಸ್ಕಾರಗಳಿರಲೀ ಇತರೆ ಪೂಜಾ ಸಾಮಗ್ರಿಗಳ ಜೊತೆ ಸದಾ ಇರುವ ಒಬ್ಬ ಸದಸ್ಯ. ಹಬ್ಬ ಅಥವಾ ಇನ್ನಿತರೆ ಸಂದರ್ಭಗಳಲ್ಲಿ ಮನೆಗೆ ಯಾರಾದರೂ ಮುತ್ತೈದೆ ಹೆಣ್ಣು ಮಕ್ಕಳು ಬಂದರೆ ಅರಿಶಿಣ ಕುಂಕುಮ ಹೂವಿನ ಜೊತೆಗೆ ಎಲೆ ಅಡಿಕೆಯೊಟ್ಟಿಗೆ ಎರಡು ಬಾಳೆಹಣ್ಣು ಇಟ್ಟು ಕೊಡುವ ಪದ್ಧತಿ ನಮ್ಮದು.

ಬಾಳೆ ಗಿಡ ಸುಮಾರು 10 ರಿಂದ 33 ಅಡಿ ಎತ್ತರದಷ್ಟು ಬೆಳೆಯುತ್ತದೆ. ಆದ್ದರಿಂದ ಇದನ್ನು ಬಾಳೆ ಮರ ಎನ್ನುವುದಕ್ಕಿಂತ ಬಾಳೆ ಗಿಡ ಎಂದೇ ಹೆಚ್ಚಾಗಿ ಸಂಬೋದಿಸುವರು. ಇದರ ಕಾಂಡ ಟೊಳ್ಳು. ಬಾಳೆಯ ಕಾಂಡ ಬಾಗವನ್ನು ಬಾಳೆದಿಂಡು ಎಂದು ಕರೆಯುವುದೇ ಹೆಚ್ಚು. ವೈಜ್ಞಾನಿಕವಾಗಿ ಬಾಳೆ ಹಣ್ಣು ಮ್ಯುಸೇಸಿ ಕುಲಕ್ಕೆ ಸೇರಿದ್ದು ಮ್ಯೂಸಾ ಅಕ್ಯುಮಿನೇಟ ಎನ್ನಲಾಗುತ್ತದೆ. ಸುಮಾರು ನಾಲ್ಕು ಸಾವಿರ ವರ್ಷಗಳಿಂದಲೂ ಬಾಳೆಯು ನಮ್ಮ ಬಾರತದಲ್ಲಿ ಅಸ್ತಿತ್ವದಲ್ಲಿದೆ ಎಂಬ ಮಾಹಿತಿ ಇದೆ. ಆಗ್ನೇಯ ಏಶ್ಯಾ ಬಾಗದಲ್ಲಿ ಮೊದಲು ಹುಟ್ಟಿದ್ದರೂ ಹೆಚ್ಚಾಗಿ ಇದರ ವಾಸ್ತವ್ಯ ಇರುವುದು ನಮ್ಮ ಬಾರತದಲ್ಲಿ. ತಾಯ್ಲ್ಯಾಂಡ್, ಚೈನಾ, ಇಂಡೋನೇಶ್ಯಾ, ಹೀಗೆ ನಮ್ಮ ನೆರೆ ಹೊರೆಯ ರಾಷ್ಟ್ರಗಳಲ್ಲೂ ಇದರ ಬಳಕೆ ಇದೆ. ನೀರು ಬಸಿದು ಹೋಗುವಂತಹ ಫಲವತ್ತಾದ ಮಣ್ಣು ಇದರ ಬೆಳೆಗೆ ಸೂಕ್ತವಾದುದು. ಬಾಳೆ ಹಣ್ಣಿನ ವಿವಿದ ತಳಿಗಳು ಈಗಾಗಲೇ ತಿಳಿದಿರಬಹುದು. ಅದರ ಗಾತ್ರ, ಎತ್ತರ ಮತ್ತು ದೃಡತೆಗೆ ತಕ್ಕಂತೆ ಬಾಳೆಹಣ್ಣಿನ ವಿವಿದ ಪ್ರಬೇದಗಳನ್ನು ಗುರುತಿಸಬಹುದು. ಪಚ್ಚಬಾಳೆ, ರಸಬಾಳೆ, ಏಲಕ್ಕಿಬಾಳೆ, ಪುಟ್ಟಬಾಳೆ, ನೇಂದ್ರಬಾಳೆ ಹೀಗೆ. ರೈತನಿಗೆ ಬಾಳೆ ಪ್ರಮುಖವಾದ ವಾಣಿಜ್ಯ ಬೆಳೆ.

ಎಲ್ಲರ ಮನೆಯಲ್ಲೂ ಸದಾ ಬಾಳೆಹಣ್ಣು ಇದ್ದೇ ಇರುತ್ತದೆ. ಮಕ್ಕಳಿಗೂ, ಹಿರಿಯರಿಗೂ ಹೀಗೆ ಎಲ್ಲರಿಗೂ ಪ್ರಿಯವಾದ ಹಣ್ಣು ಬಾಳೆಹಣ್ಣು. ಹಣ್ಣುಗಳ ರುಚಿಯಲ್ಲಿ ಮಾವು ಮೊದಲನೇ ಸ್ಥಾನ ಪಡೆದುಕೊಂಡರೆ, ಬಾಳೆ ಹಣ್ಣು ಎರಡನೇ ಸ್ಥಾನ ಮತ್ತು ಅತ್ಯಂತ ಜನಪ್ರಿಯವಾದ ಹಣ್ಣು. ಬಾಳೆ ಗಿಡದ ಮತ್ತೊಂದು ವಿಶೇಷವೆಂದರೆ ಒಂದು ಗಿಡಕ್ಕೆ ಒಂದು ಬಾರಿಗೆ ನೂರಾರು ಹಣ್ಣುಗಳಿರುವ ಒಂದೇ ಬಾಳೆಗೊನೆ ಬಿಡುವುದು. ಬಾಳೆ ಹಣ್ಣಿನಿಂದ ರಸಾಯನ, ಕೆಲವು ಸಿಹಿತಿಂಡಿ, ಹಾಗೆಯೇ ಚಿಪ್ಸ್, ಬಜ್ಜಿ ತಯಾರಿಸಲಾಗುತ್ತದೆ. ಕೇರಳದಲ್ಲಿ ಬಾಳೆಕಾಯಿ ಚಿಪ್ಸ್ ಒಂದು ಜನಪ್ರಿಯ ವಿಶೇಷ ಖಾದ್ಯ.

ಯಾವುದೇ ಋತುವಿರಲೀ ಸದಾ ದೊರೆಯುವ ಬಾಳೆ ಹಣ್ಣಿನ ಪ್ರಯೋಜನ ನಮ್ಮೆಲ್ಲರ ಗಮನಕ್ಕೆ ಬಂದಿದೆ. ಆದರೂ ಇದರ ಉಪಯೋಗಗಳ ಬಗ್ಗೆ ಇನ್ನಷ್ಟು ವಿಚಾರ ತಿಳಿಯೋಣ. ಊಟದ ನಂತರ ಬಾಳೆಹಣ್ಣು ತಿನ್ನುವುದರಿಂದ ಹಲವಾರು ಆರೋಗ್ಯದ ಲಾಭಗಳು ಇವೆ:

1. ಬಾಳೆಹಣ್ಣುಗಳಲ್ಲಿ ಪೊಟ್ಯಾಸಿಯಂ, ವಿಟಮಿನ್ ಬಿ6, ವಿಟಮಿನ್ ಸಿ, ನೈಸರ್ಗಿಕ ಶರ್ಕರ (ಪ್ರುಕ್ಟೋಸ್, ಗ್ಲೂಕೋಸ್, ಸುಕ್ರೋಸ್) ಮತ್ತು ನಾರಿನಾಂಶ (ಫೈಬರ್) ಇದೆ.
2. ಬಾಳೆಹಣ್ಣಿನ ನಾರಿನಾಂಶ ಜೀರ್ಣ ಕ್ರಿಯೆಯನ್ನು ಸುಗಮಗೊಳಿಸುತ್ತದೆ, ಇದು ಮಲಬದ್ದತೆಯನ್ನು ತಡೆಹಿಡಿಯಲು ಸಹಾಯ ಮಾಡುತ್ತದೆ.
3. ಬಾಳೆಹಣ್ಣಿನ ನೈಸರ್ಗಿಕ ಕಿಣ್ವಗಳು ಅಜೀರ್ಣವನ್ನು ತಡೆಹಿಡಿಯಲು ಸಹಾಯ ಮಾಡುತ್ತವೆ.
4. ಬಾಳೆಹಣ್ಣಿನ ಪೊಟ್ಯಾಸಿಯಂ ಹೃದಯದ ಆರೋಗ್ಯಕ್ಕೆ ಒಳ್ಳೆಯದು. ಇದು ರಕ್ತದ ಒತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.
5. ಹೊಟ್ಟೆಯ ಹುಣ್ಣಿಗೆ ಒಳ್ಳೆಯ ಮದ್ದು ಈ ಬಾಳೆಹಣ್ಣು.

ಪಚ್ಚಬಾಳೆ, ಏಲಕ್ಕಿಬಾಳೆ ಹಾಗೂ ರಸಬಾಳೆ ಕರ್ನಾಟಕದಲ್ಲಿ ಮುಖ್ಯವಾಗಿ ಬೆಳೆಯುವ ಬಾಳೆ ಬೆಳೆಗಳು. ಅವುಗಳ ವ್ಯತ್ಯಾಸವನ್ನು ಗುರುತಿಸೋಣ

ಪಚ್ಚಬಾಳೆ: ರೋಬಾಸ್ಟಾ ಇದರ ಇನ್ನೊಂದು ಹೆಸರು. ಕರ್ನಾಟಕ ಮತ್ತು ಬಾರತದ ವಿವಿದ ಬಾಗಗಳಲ್ಲಿ ಅಗಾದವಾಗಿ ಬೆಳೆಯಲಾಗುವ ಮತ್ತು ಬಳಕೆಯಲ್ಲಿರುವ ಹಣ್ಣು. ಈ ಹಣ್ಣು ಗಾತ್ರದಲ್ಲಿ ಸ್ವಲ್ಪ ದೊಡ್ಡದು. ಹೆಸರಲ್ಲಿ ಪಚ್ಚೆ ಇದ್ದರೂ ಹಣ್ಣಾದಾಗ ಹಳದಿ ಬಣ್ಣವಾಗಿ, ಸಿಪ್ಪೆ ಸ್ವಲ್ಪ ದಪ್ಪದಾಗಿರುತ್ತದೆ. ಬೇರೆ ಬಗೆಯ ಬಾಳೆಹಣ್ಣುಗಳಿಗಿಂತ ಹೆಚ್ಚು ಸಿಹಿಯಿಂದ ಕೂಡಿರುತ್ತದೆ. ಆದರೆ ಸುವಾಸನೆ ಕಡಿಮೆ. ಪಚ್ಚೆಬಾಳೆಯಲ್ಲಿ ಕಡಿಮೆ ಗ್ಲೈಸಮಿಕ್ ಸೂಚ್ಯಾಂಕದಿಂದಾಗಿ, ರಕ್ತದಲ್ಲಿನ ಸಕ್ಕರೆ ಏರಿಕೆ ತಡೆಯುತ್ತದೆ. ಡಯಾಬಿಟೀಸ್ ರೋಗಿಗಳಿಗೆ ಸೇವಿಸಲು ಅನುಕೂಲಕರ. ಇದರಲ್ಲಿ ನಾರಿನಂಶವಿರುವುದರಿಂದ ಜೀರ್ಣಕ್ರಿಯೆಗೆ ಕೈಜೋಡಿಸುತ್ತದೆ.

ಏಲಕ್ಕಿಬಾಳೆ: ಕರ್ಪೂರವಲ್ಲಿ ಇದರ ಇನ್ನೊಂದು ಹೆಸರು. ಪಚ್ಚೆಬಾಳೆಹಣ್ಣಿಗಿಂತ ರುಚಿಯಲ್ಲಿ ಮುಂದು. ಪೂಜಾದಿ ಧಾರ್ಮಿಕ ಕಾರ್ಯಗಳಲ್ಲಿಯೂ ಇದರ ಬೇಡಿಕೆ ಹೆಚ್ಚು. ಎಲ್ಲಾ ಬಾಳೆಯಂತೆ ನಾರಿನಾಂಶ ಹೆಚ್ಚು. ಕರುಳಿನ ಬೇನೆ, ಜೀರ್ಣಕ್ರಿಯೆಗೂ ಅನುಕೂಲಕಾರಿ. ಏಲಕ್ಕಿಬಾಳೆಯಲ್ಲಿರುವ ಟ್ರಿಪ್ಟೋಫಾನ್ ಮನಸ್ಸಿನ ಒತ್ತಡವನ್ನು ನಿಯಂತ್ರಣದಲ್ಲಿಡುತ್ತದೆ. ಇದು ಏಲಕ್ಕಿ ಬಾಳೆಯ ವಿಶೇಷತೆ.

ರಸಬಾಳೆ: ಇದು ಬಾಳೆಯ ಇನ್ನೊಂದು ತಳಿ, ನಂಜನಗೂಡಿನ ರಸಬಾಳೆ ಎಂದೇ ಪ್ರಸಿದ್ದ. ಗಾತ್ರದಲ್ಲಿ ದಪ್ಪನಾಗಿದ್ದು, ನಂಜನಗೂಡು ಮತ್ತು ಮೈಸೂರಿನ ಸುತ್ತಮುತ್ತ ಬೆಳೆಯುವ ಒಂದು ಬಾಳೆಹಣ್ಣು.

ಬಾಳೆ ಹಣ್ಣಿನ ಸಿಪ್ಪೆಯನ್ನು ಹಳ್ಳಿ ಕಡೆ ದನಕರುಗಳಿಗೆ ಆಹಾರವಾಗಿ ನೀಡಲಾಗುತ್ತದೆ. ಗಿಡಗಳಿಗೆ ಗೊಬ್ಬರವಾಗಿ, ಹಾಕಲಾಗುತ್ತದೆ. ಮೊಡವೆ, ತುರಿಕೆಗಳಂತಹ ಅಲರ್ಜಿಗೆ ಬಾಳೆ ಹಣ್ಣಿನ ಸಿಪ್ಪೆಯ ತಿರುಳು ಬಹಳ ಒಳ್ಳೆಯದು. ಟೀ, ಕಾಫೀ, ದೂಮಪಾನ ಸೇವನೆಯಿಂದ ಆಗುವ ಹಲ್ಲಿನ ಮೇಲಿನ ಕಲೆಗಳಿಗೆ ಈ ಸಿಪ್ಪೆಯ ಬಾಗ ಉಪಯೋಗಕಾರಿ.

ಬಾಳೆಯ ಕಾಂಡ ಅಥವಾ ಬಾಳೆ ದಿಂಡಿನ ಉಪಯೋಗಗಳು ಈಗೀಗ ಹೆಚ್ಚು ಜನಪ್ರಿಯವಗುತ್ತಿದೆ. ಬಾಳೆ ದಿಂಡಿನ ಜ್ಯೂಸ್, ಪಲ್ಯ ಯಾವುದೇ ಆಗಿರಲಿ ಕಿಡ್ನಿ ಕಲ್ಲು ಕರಗಲು ರಾಮಬಾಣ. ಚಾಟ್ಸ್ ಸೆಂಟರ್‌ಗಳಲ್ಲಿ ಇತ್ತೀಚಿಗೆ ರುಚಿಯಾದ ಖಾದ್ಯ ತಯಾರಿಕೆಯಲ್ಲಿ ಬಳಸುತ್ತಿರುತ್ತಾರೆ. ಹಬ್ಬಗಳಲ್ಲಿ ಎಲೆ ಸಮೇತವಿರುವ ಪುಟ್ಟ ಪುಟ್ಟ ಬಾಳೆ ಕಂಬಗಳಿದ್ದರೆ ದೇವರ ಮಂಟಪದ ಎರಡು ಬದಿ ಅಲಂಕಾರಿಕವಾಗಿ ಇಡಬಹುದು. ಮದುವೆ ಮಂಟಪಗಳ ಚಪ್ಪರದ ಕಂಬಗಳಿಗೂ ಕಟ್ಟುವ ಪದ್ಧತಿ ಆಚರಣೆಯಲ್ಲಿದೆ. ಆಯುದಪೂಜೆ ವೇಳೆ ವಾಹನಗಳ ಅಲಂಕಾರಕ್ಕೆ ಚಿಕ್ಕ ಮತ್ತು ಚೊಕ್ಕದಾದ ಬಾಳೆ ಕಂಬಗಳು ಅಂದಕ್ಕೆ ಮೆರುಗು ಕೊಡುತ್ತವೆ.



ಹಿಂದಿನ ಕಾಲದಿಂದಲೂ ಪೂಜಾಕೈಂಕರ್ಯಗಳಲ್ಲಿ ಬಾಳೆಯ ಹಲವು ಬಾಗಗಳನ್ನು ಬಳಸುತ್ತಾ ಬಂದಿರುವುದನ್ನು ಕಾಣಬಹುದು. ಇದರಲ್ಲಿ ಅದರ ಉಪಯೋಗಕಾರಿ ಗುಣ ಮತ್ತು ಪಾವಿತ್ರ್ಯತೆಯನ್ನು ಕಾಣಬಹುದು.

– **ಶ್ಯಾಮಲ** ಶ್ರೀ.ಕೆ.ಎಸ್.

# ಆಸ್ಟ್ರೇಲಿಯಾ ಪ್ರವಾಸಕ್ಕೆ ಟೀಂ ಇಂಡಿಯಾ ಪ್ರಕಟ

## ರವೀಂದ್ರ ಜಡೇಜಾ, ಜಸ್ ಪ್ರೀತ್ ಬುಮ್ರಾಗೆ ವಿಶ್ರಾಂತಿ

• ಪ್ರಜೋದಯ ವರದಿ

**ನವದೆಹಲಿ:** ಏಕದಿನ ಹಾಗೂ ಟಿ-20 ಸರಣಿ ಒಳಗೊಂಡಿರುವ ಆಸ್ಟ್ರೇಲಿಯಾ ಪ್ರವಾಸಕ್ಕೆ ಭಾರತ ತಂಡ ಪ್ರಕಟವಾಗಿದ್ದು, ಏಕದಿನ ಕ್ರಿಕೆಟ್ ತಂಡದ ನಾಯಕರಾಗಿ ಶುಭ್‌ಮನ್ ಗಿಲ್ ಆಯ್ಕೆಯಾಗಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಹಾಗೂ ಐದು ಪಂದ್ಯಗಳ ಟಿ-20 ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಟೆಸ್ಟ್ ತಂಡದ ನಾಯಕರಾಗಿದ್ದ ಶುಭ್ ಮನ್ ಗಿಲ್‌ರನ್ನು ಏಕದಿನ ಕ್ರಿಕೆಟ್‌ಗೂ ನಾಯಕರಾಗಿ ಆಯ್ಕೆ ಮಾಡಲಾಗಿದೆ.

ಮುಂಬರುವ ಏಕದಿನ ವಿಶ್ವಕಪ್ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ತಂಡ ರಚಿಸಬೇಕಾದ ಒತ್ತಡ ಆಯ್ಕೆ ಸಮಿತಿ ಬೇಕಿತ್ತು. ಹಾಗಾಗಿ ತೀವ್ರ ಕುತೂಹ ಕೆರಳಿಸಿದ್ದ ಏಕದಿನ ತಂಡದ ಆಯ್ಕೆ ವಿಚಾರದಲ್ಲಿ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ಅಳೆದು ತೂಗಿ ತಂಡ ಪ್ರಕಟಿಸಿದೆ.

ನಿರೀಕ್ಷೆಯಂತೆಯೇ ತಂಡದ ಹಿರಿಯ ಆಟಗಾರರಾದ ಮಾಜಿ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ತಂಡಕ್ಕೆ ವಾಪಸ್ ಆಗಿದ್ದು, ಶ್ರೇಯಸ್ ಅಯ್ಯರ್‌ಗೆ ಏಕದಿನ ತಂಡದ ಉಪನಾಯಕ ಸ್ಥಾನ ನೀಡಲಾಗಿದೆ.

ಉಳಿದಂತೆ ಆಲ್‌ರೌಂಡರ್ ಅಕ್ಸರ್ ಪಟೇಲ್ ಮತ್ತು ಯುವ ಆಟಗಾರ ನಿತೀಶ್ ಕುಮಾರ್ ರೆಡ್ಡಿ, ವಿಕೆಟ್ ಕೀಪರ್ ಬ್ಯಾಟರ್ ಪಾತ್ರದಲ್ಲಿ ಕನ್ನಡಿಗ ಕೆ.ಎಲ್.ರಾಹುಲ್, ಸ್ಪಿನ್ನರ್‌ಗಳ ವಿಭಾಗದಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ಕುಲದೀಪ್ ಯಾದವ್ ಸ್ಥಾನಗಳಿಸಿದ್ದಾರೆ.

ವೇಗಿಗಳ ವಿಭಾಗದಲ್ಲಿ ಹರ್ಷಿತ್ ರಾಣಾ, ಮಹಮದ್ ಸಿರಾಜ್, ಅರ್ಶ್‌ದೀಪ್ ಸಿಂಗ್, ಕನ್ನಡಿಗ ಪ್ರಸಿದ್ಧ್ ಕೃಷ್ಣ ಸ್ಥಾನ ಪಡೆದಿದ್ದರೆ, ಪರ್ಯಾಯ ವಿಕೆಟ್ ಕೀಪರ್ ಬ್ಯಾಟರ್ ಆಗಿ ಧ್ರುವ್ ಜುರೆಲ್, ಹೆಚ್ಚುವರಿ ಬ್ಯಾಟರ್ ಆಗಿ ಯಶಸ್ವಿ ಜೈಸ್ವಾಲ್ ಏಕದಿನ ತಂಡಕ್ಕೆ ಆಯ್ಕೆಯಾಗಿದ್ದಾರೆ.






**ರವೀಂದ್ರ ಜಡೇಜಾ, ಜಸ್ ಪ್ರೀತ್ ಬುಮ್ರಾಗೆ ವಿಶ್ರಾಂತಿ**

ಇನ್ನು ತಂಡದ ಪ್ರಮುಖ ಆಲ್ ರೌಂಡರ್ ರವೀಂದ್ರ ಜಡೇಜಾ ಮತ್ತು ಸ್ಟಾರ್ ವೇಗಿ ಜಸ್ ಪ್ರೀತ್ ಬುಮ್ರಾ ಅವರಿಗೆ ಏಕದಿನ ಸರಣಿ ಯಿಂದ ವಿಶ್ರಾಂತಿ ನೀಡಲಾಗಿದೆ.

ಇನ್ನು ಟಿ-20 ಸರಣಿಗಾಗಿ ಸೂರ್ಯಕುಮಾರ್ ಯಾದವ್ ನೇತತ್ವದ ತಂಡ ಪ್ರಕಟಿಸಲಾಗಿದ್ದು, ಇಲ್ಲಿ ಶುಭ್ ಮನ್‌ಗಿಲ್ ಉಪ ನಾಯಕರಾಗಿ ಮುಂದುವರೆದಿದ್ದಾರೆ. ಏಷ್ಯಾಕಪ್ ಟೂರ್ನಿ ಆಡಿದ್ದ ಬಹುತೇಕ ಅದೇ ತಂಡವನ್ನು ಆಸ್ಟ್ರೇಲಿಯಾ ವಿರುದ್ಧ ಟಿ-20 ಸರಣಿಗೂ ಉಳಿಸಿಕೊಳ್ಳಲಾಗಿದ್ದು, ಗಾಯಾಳು ಹಾರ್ದಿಕ್ ಪಾಂಡ್ಯ ತಂಡದಿಂದ ಮಿಸ್ ಆಗಿದ್ದಾರೆ.

ಉಳಿದಂತೆ ಅಭಿಷೇಕ್ ಶರ್ಮಾ, ಏಷ್ಯಾಕಪ್ ಫೈನಲ್ ಹೀರೋ ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂದುಬೆ, ಅಕ್ಸರ್ ಪಟೇಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ), ವರಣ್ ಚಕ್ರವರ್ತಿ, ಜಸ್ ಪ್ರೀತ್ ಬುಮ್ರಾ, ಅರ್ಶ್‌ದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್, ರಿಂಕು ಸಿಂಗ್ ಮತ್ತು ವಾಷಿಂಗ್ಟನ್ ಸುಂದರ್ ಟಿ-20 ತಂಡದಲ್ಲಿದ್ದಾರೆ.

## ಇಂದು ಕೆ.ವಿ.ಪ್ರಭಾಕರ್, ನಾಳೆ ದಿನೇಶ್ ಗುಂಡೂರಾವ್ ಭೇಟಿ

• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರ ಕೆ.ವಿ.ಪ್ರಭಾಕರ್ ಅವರು ಅ.5 ರಂದು ಹಾಗು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಅ.6ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚನ್ನರಾಯಪಟ್ಟಣದ ಸರ್ಕಾರಿ ಶಾಲೆ ಆವರಣದಲ್ಲಿ ಪ್ರಸನ್ನ ಗಣಪತಿ ಸೇವಾ ಸಮಿತಿ, ಎಂ.ಎ. ಗೋಪಾಲ ಸ್ವಾಮಿ ಬ್ರಿಗೇಡ್ ವತಿಯಿಂದ ಹಮ್ಮಿಕೊಂಡಿರುವ ಅಂತರರಾಜ್ಯ ಮಟ್ಟದ ಪುರುಷ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿಗೆ ಭಾನುವಾರ ಸಂಜೆ 6ಕ್ಕೆ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರ ಕೆ.ವಿ.ಪ್ರಭಾಕರ್ ಅವರು ಭಾಗವಹಿಸಲಿದ್ದಾರೆ. ಸೋಮವಾರ ಬೆಳಿಗ್ಗೆ 9 ಗಂಟೆಗೆ ನಡೆಯುವ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಕಬಡ್ಡಿ ಪಂದ್ಯಾವಳಿ ಕಾರ್ಯಕ್ರಮದಲ್ಲಿ ಸಚಿವ ಗುಂಡೂರಾವ್ ಭಾಗವಹಿಸಲಿದ್ದಾರೆ.

## ಹಿರಿಯರಿಲ್ಲದ ಮನೆ ಕಳಸವಿಲ್ಲದೆ ಮಂದಿರದಂತೆ

» ಮೊದಲನೇ ಪುಟದಿಂದ

**ಜೀವಿತಾವಧಿ ಹೆಚ್ಚಳ**

ಹಿಂದಿನ ದಿನಮಾನಗಳಿಗೆ ಹೋಲಿಸಿದರೆ ಇಂದಿನ ದಿನಗಳಲ್ಲಿ ಮನುಷ್ಯನ ಜೀವಿತಾವಧಿ ಹೆಚ್ಚಾಗಿದೆ. ಅದಕ್ಕೆ ಕಾರಣ ಆರೋಗ್ಯದಲ್ಲಿ ಸುಧಾರಣೆಯಾಗಿರುವುದು, ಆರೋಗ್ಯವೇ ಆಸ್ತಿ, ಹಣಕಾಸಿನ ವಿಚಾರದಲ್ಲಿ ಸ್ವತಂತ್ರವಾಗಿರಬೇಕು. ಯಾರಿಗೂ ಭಾರವಾಗಂತೆ ಕೊನೆಯ ಉಸಿರು ಇರುವವರೆಗೂ ಆರೋಗ್ಯ ಕಾಪಾಡಿಕೊಂಡು ಶಿಸ್ತುಬದ್ಧ ಜೀವನ ನಡೆಸಬೇಕು. ಕಿರಿಯರಿಂದ ನಿರೀಕ್ಷೆ ಕಡಿಮೆ ಮಾಡಬೇಕೆಂದು ತಿಳಿಸಿದರು.

ವಯಸ್ಸು ಕೇವಲ ಸಂಖ್ಯೆ, ಮನಸ್ಸಿಗೆ ಜಡ್ಡು ಹಿಡಿಯದಂತೆ ಕ್ರಿಯಾಶೀಲರಾಗಿ ಯಾರ ಮೇಲೂ ಅವಲಂಬಿತರಾಗದೆ ಆತ್ಮವಿಶ್ವಾಸದಿಂದ ಜೀವನ ನಡೆಸಬೇಕು. ಹಿರಿಯರು ಅನಿವಾರ್ಯ ಸಂದರ್ಭಗಳಲ್ಲಿ ವೃದ್ಧಾಶ್ರಮಗಳಲ್ಲಿ ಜೀವನ ನಡೆಸಲು ಸರ್ಕಾರ ಅವಕಾಶ ಕಲ್ಪಿಸಿದೆ ಎಂದರು.

ಹಿರಿಯರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದರಲ್ಲದೆ, ಹಿರಿಯರಿಗೆ ಯಾವುದೇ ತೊಂದರೆಯಾದಲ್ಲಿ ಸಹಾಯವಾಣಿ ಸಂಖ್ಯೆ 14567 ಕರೆ ಮಾಡಬೇಕು. ಮನೆ ಯಲ್ಲಿ ಮಕ್ಕಳು ಪ್ರತಿನಿತ್ಯ ತಂದೆ-ತಾಯಿ ನಡವಳಿಕೆ ನೋಡುತ್ತಾ ಬೆಳೆಯುತ್ತಾರೆ. ಈ ನಿಟ್ಟಿನಲ್ಲಿ ಮನೆಗಳಲ್ಲಿ ಹಿರಿಯರನ್ನು ಪ್ರೀತಿ ಯಿಂದ ನೋಡಿಕೊಂಡಲ್ಲಿ ತಮ್ಮ ಮಕ್ಕಳು ಮುಂದೆ ಅದನ್ನೇ ಅನುಸರಿಸುತ್ತಾರೆಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು ಅವರು ಮಾತನಾಡಿ, ಹಿರಿಯರು ಛಲ, ಸಹನೆ, ಅಭಿಮಾನ, ಸತ್ಯ ನಿಷ್ಠೆಯಿಂದ ಇರುತ್ತಾರೆ. ಅವರ ಸ್ವಾತಂತ್ರ್ಯವನ್ನು ಮಕ್ಕಳು ಕಿತ್ತು ಕೊಳ್ಳದೆ ಪ್ರೀತಿಯಿಂದ ನೋಡಿಕೊಳ್ಳಬೇಕು. ಮನೆಯಲ್ಲಿಯೇ ಕೂಡಿ ಹಾಕದೆ ಹೊರಗೆ ಓಡಾಡಿಕೊಂಡು ಕೊನೆಯ ದಿನಗಳನ್ನು ಸಂತೋಷವಾಗಿ ಕಳೆಯಲು ಅವಕಾಶ ಕಲ್ಪಿಸಬೇಕೆಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಧರಣಿ ಕುಮಾರ್, ಹಿರಿಯ ನಾಗರಿಕರ ಮತ್ತು ವಿಕಲಚೇತನರ ಇಲಾಖೆ ಅಧಿಕಾರಿ ಕೆ.ಆರ್.ಅನುಪಮ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ನಾಗರಿಕರಾದ ಅನಂತ ರಾಮು ಮತ್ತು ರಂಗಯ್ಯ ಅವರನ್ನು ಸನ್ಮಾನಿಸಲಾಯಿತು. ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ವರಿಗೆ ಬಹುಮಾನ ವಿತರಿಸಲಾಯಿತು. ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

## ಗ್ರಾಮ ಅಭಿವೃದ್ಧಿಗೆ ಸಂಪಕ ರಸ್ತೆ ಪೂರಕ



• ಪ್ರಜೋದಯ ವರದಿ

**ಆಲೂರು:** ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಪಡಿಸುವುದರಿಂದ ಹಳ್ಳಿಗಳು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರದ ಅನುದಾನಕ್ಕೆ ಅನುಗುಣವಾಗಿ ಪ್ರತಿ ಗ್ರಾಮದಲ್ಲಿಯೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆದ್ಯತೆ ನೀಡಲಾಗುತ್ತಿದೆ. ಹಂತ ಹಂತವಾಗಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದೆಂದರು.

ಗ್ರಾಮೀಣ ರಸ್ತೆ ಅಭಿವೃದ್ಧಿ, ಕುಡಿಯುವ ನೀರು, ಶೌಚಾಲಯ, ಶಾಲಾ, ಅಂಗನವಾಡಿ ಕೋಣೆಗಳು ಹೀಗೆ ಕ್ಷೇತ್ರದ ಕೆಲಸಗಳಿಗೆ ಆದ್ಯತೆ ನೀಡಲಾಗಿದೆ. ಕಾರಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಣಿಪುರ ಜಂಕ್ಷನ್ ಬಳಿ ಮಣಿಪುರ ಮತ್ತು ಪುರಭೈರವನಹಳ್ಳಿಗೆ ಸಂಪರ್ಕಿಸುವ ರಸ್ತೆ, ಭರತೂರು, ಬಾಳಿಗನಹಳ್ಳಿ, ಕುಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿಳುಗರವಳ್ಳಿ, ಕಟ್ಟಾಯ ಹೋಬಳಿ ಕಾರ್ಲೆ ಪಂಚಾಯಿತಿ ವ್ಯಾಪ್ತಿಯ ದೇವಿಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಲಿರುವ ಬ್ರಹ್ಮಲಿಂಗೇಶ್ವರ ದೇವಾಲಯಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ.

ಈ ಎಲ್ಲಾ ಕಾಮಗಾರಿಗಳು ನಿಗದಿತ ಸಮಯದಲ್ಲಿ ಮುಗಿಯಬೇಕು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕೆಂದು ಗುತ್ತಿಗೆದಾರರು ಹಾಗು ಇಂಜಿನೀಯರ್‌ಗಳಿಗೆ ಸೂಚಿಸಿದರು.

## ಎಲ್ಲರ ವಿಶ್ವಾಸದೊಂದಿಗೆ ಒಳ್ಳೆಯ ಕೆಲಸ ಮಾಡುವೆ

• ಪ್ರಜೋದಯ ವರದಿ

**ಅರಸೀಕೆರೆ:** ದಶಕಗಳಿಂದ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದಿದ್ದಕ್ಕೆ ಪಕ್ಷ ಗುರುತಿಸಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸ್ಥಾನ ಕಲ್ಪಿಸಿದ್ದು ಎಲ್ಲರ ವಿಶ್ವಾಸ ಗಳಿಸಿ ಕೆಲಸ ಮಾಡುತ್ತೇನೆಂದು ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಹೇಳಿದರು.

ಶನಿವಾರ ನಗರದಲ್ಲಿ ಪಕ್ಷದ ಕಾರ್ಯಕರ್ತರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಜಿಲ್ಲಾ ಪಂಚಾಯಿತಿ ಸದಸ್ಯ, ಕೆಪಿಸಿಸಿ ಕಾರ್ಯದರ್ಶಿಯಾಗಿ ಪಕ್ಷ ನೀಡಿದ ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದ ನನಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಸೇರಿ ಗಂಡಸಿ ಹಾಗು ಅರಸೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪಕ್ಷದ ಹಿರಿಯರು ಹುಡಾ ಅಧ್ಯಕ್ಷ ಸ್ಥಾನಕ್ಕೆ ಶಿಫಾರಸು ಮಾಡಿದ್ದರೆಂದರು. ಹುಡಾ ಅಧ್ಯಕ್ಷ ಸ್ಥಾನ ಸಾಮಾನ್ಯ ಹುದ್ದೆಯಲ್ಲ. ಅದರದೇ ಆದ ಗಂಭೀರತೆ ಇದೆ. ಪಕ್ಷ ಹಾಗು ಮುಖಂಡರು ಸೇರಿ ತಾಲ್ಲೂಕಿನ ಜನರಿಗೆ ಮುಜುಗರ ಆಗದ ರೀತಿ ಕೆಲಸ ಮಾಡುವೆಯೆಂದು ಭರವಸೆ ನೀಡಿದರು.



ಕಾಂಗ್ರೆಸ್ ಮುಖಂಡ ಜಿ.ಬಿ. ಶಶಿಧರ್ ಅವರು ಮಾತನಾಡಿ, ಶಿವಪ್ಪ ಅವರ ಪಕ್ಷನಿಷ್ಠೆ ಹಾಗು ಅವರಲ್ಲಿರುವ ಸಾಮಾಜಿಕ ಕಳಕಳಿಯನ್ನು ಪಕ್ಷ ಗುರುತಿಸಿ ಜವಾಬ್ದಾರಿ ಸ್ಥಾನ ನೀಡಿದೆ. ಇದು ಪಕ್ಷದ ಯುವ ಕಾರ್ಯಕರ್ತರಿಗೆ ಸ್ಫೂರ್ತಿಯಾಗಿದೆ. ಸೂಕ್ತ ಸಂದರ್ಭದಲ್ಲಿ ಪಕ್ಷ ಪ್ರತಿಯೊಬ್ಬರಿಗೂ ಸೂಕ್ತ ಸ್ಥಾನಮಾನ ನೀಡಲಿದೆ ಎಂಬುದಕ್ಕೆ ಶಿವಪ್ಪ ಅವರೇ ಸಾಕ್ಷಿಯೆಂದರು.

ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ ಅವರು ಮಾತನಾಡಿ, ಪಟೇಲ್ ಶಿವಪ್ಪ ಅವರು ಹುಡಾ ಅಧ್ಯಕ್ಷರಾಗಿರುವುದು ಸಂತಸದ ವಿಷಯ. ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ದೊರೆಯಲಿದೆ ಯೆಂಬ ವಿಶ್ವಾಸವಿದೆ ಎಂದರು.

ಮೊದಲಿಗೆ ನಗರದ ಅಂಬೇಡ್ಕರ್ ವೃತ್ತದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಶಿವಪ್ಪ ಅವರು, ನಂತರ ಪ್ರಸನ್ನ ಗಣಪತಿ ಆಸ್ಥಾನ ಮಂಟಪಕ್ಕೆ ತೆರಳಿ, ವಿಘ್ನ ನಿವಾರಕನಿಗೆ ಪೂಜೆ ಸಲ್ಲಿಸಿದರು. ಪ್ರವಾಸಿ ಮಂದಿರದಲ್ಲಿ ಕಾರ್ಯಕರ್ತರೊಂದಿಗೆ ಕೆಲ ಸಮಯ ಕಳೆದರು.

ನಗರಸಭೆ ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ನಗರಸಭೆ ಸದಸ್ಯ ವೆಂಕಟಮುನಿ, ಮುಖಂಡರಾದ ಗೌಸ್‌ಖಾನ್, ಉಮಾಶಂಕರ್, ಸುಬ್ರಹ್ಮಣ್ಯ, ಬಾಬು, ಯೂನಸ್, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸಿಖಂದರ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಈಶ್ವರಪ್ಪ, ಹನುಮೇಗೌಡ, ಮುಖಂಡ ಮೋಹನ್ ನಾಯ್ಕ ಇತರರಿದ್ದರು.

## ಹಾಸನಾಂಬೆ ದರ್ಶನಕ್ಕಾಗಿ ವಾಟ್ಸ್ಆ್ಯಪ್ ಚಾಟ್‌ಬಾಟ್

» ಮೊದಲನೇ ಪುಟದಿಂದ

ಸಾಲು ಎಷ್ಟಿದೆ, ನಿರ್ಗಮನ, ಆಗಮನದ ಮಾಹಿತಿ ಯನ್ನು ಕುಳಿತಲ್ಲೇ ತಿಳಿಯಲು ಅವಕಾಶ ಕಲ್ಪಿಸಿರುವುದು ಭಕ್ತರಿಗೆ ಹೆಚ್ಚಿನ ಅನುಕೂಲವಾಗಲಿದೆ.

ಅ.9ಕ್ಕೆ ಹಾಸನಾಂಬೆ ದೇಗುಲದ ಗರ್ಭಗುಡಿಯ ಬಾಗಿಲು ತೆರೆಯಲಿದ್ದು, 23ರವರೆಗೂ ದೇವಿ ದರ್ಶನಕ್ಕೆ ಅವಕಾಶ ಸಿಗಲಿದೆ. ಈ ವರ್ಷ ದಾಖಲೆಯ 15 ದಿನ ದೇಗುಲದ ಬಾಗಿಲು ತೆರದಿರಲಿದೆ. 13 ದಿನ ಭಕ್ತರ ದರ್ಶನಕ್ಕೆ ಅವಕಾಶ ಸಿಗಲಿದ್ದು, ಭಕ್ತರಿಗೆ ಅನುಕೂಲವಾಗುವಂತೆ ಟಿಕೆಟ್ ಬುಕಿಂಗ್ ಇತ್ಯಾದಿ ಸೇವೆಗಳನ್ನು ವಾಟ್ಸ್ಆ್ಯಪ್ ಮೂಲಕ ಸಿಗುವುದರಿಂದ ದೂರದ ಊರುಗಳಿಂದ ಜಿಲ್ಲೆಗೆ ಆಗಮಿಸುವ ಭಕ್ತರಿಗೆ ನೆರವಾಗಲಿದೆ. ಈ ಸಮಯದಲ್ಲಿ ನೈವೇದ್ಯ ಹಾಗು ವಿಶೇಷ ಪೂಜೆ ಸಮಯವನ್ನು ಈ ಚಾಟ್‌ಬಾಟ್ ನಲ್ಲೇ ತಿಳಿದುಕೊಳ್ಳ ಬಹುದಾಗಿದೆ.

## ಬೇಲೂರು ತಾಲ್ಲೂಕು ಛಾಯಾಗ್ರಾಹಕರ ಸಂಘಕ್ಕೆ ಚಂದ್ರಶೇಖರ್ ಅಧ್ಯಕ್ಷ



• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾಗಿ ಚಂದ್ರಶೇಖರ್ ಪಡವಳಲು ಅವರು ಆಯ್ಕೆಯಾಗಿದ್ದಾರೆ.

ರಾಘವೇಂದ್ರ ಹೊಳ್ಳ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಪಿ.ಡಿ. ಚಂದ್ರಶೇಖರ್ ಹಾಗೂ ಹರೀಶ್ ಸ್ಪರ್ಧಿಸಿದ್ದರು. ಒಟ್ಟು 69 ಮತಗಳ ಪೈಕಿ 49 ಮತಗಳನ್ನು ಚಂದ್ರಶೇಖರ್ ಪಡವ ಳಲು ಪಡೆದು ಗೆಲುವಿನ ನಗೆ ಬೀರಿದರೆ ಪ್ರತಿಸ್ಪರ್ಧಿ ಹರೀಶ್ 20 ಮತ ಗಳಿಸಿ ಪರಾಭವಗೊಂಡರು. ಚುನಾವಣಾಧಿಕಾರಿ ಯಾಗಿ ಹಿರಿಯ ಛಾಯಾಗ್ರಾಹಕ ಡಾ.ಶ್ರೀವತ್ಸ ಎಸ್. ವಟಿ ಕಾರ್ಯ ನಿರ್ವಹಿಸಿದರು.

ಚುನಾವಣೆ ಪ್ರಕ್ರಿಯೆಯಲ್ಲಿ ಜಿಲ್ಲಾ ಸಂಘದ ಸಹ ಕಾರ್ಯದರ್ಶಿ ಮಲ್ಲೇಶ್, ಮಾಜಿ ಅಧ್ಯಕ್ಷ ಎ.ಬಿ. ಪ್ರಕಾಶ್ ಇತರರಿದ್ದರು.

## ಪ್ರತ್ಯೇಕ ಅಪಘಾತ: ಇಬ್ಬರ ಸಾವು



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಗೊರೂರು ಹಾಗು ಕೊಣನೂರು ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಬೈಕ್ ಡಿಕ್ಕಿಯಾಗಿ ಮತ್ತೊಂದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಕೇರಳಾಪುರ-ಸಾಲಿಗ್ರಾಮ ರಸ್ತೆಯ ಜಪ್ಪದಕಟ್ಟೆ ಸೇತುವೆ ಸಮೀಪ ನಡೆದಿದೆ.

ಮೈಸೂರು ಜಿಲ್ಲೆ ಕುಲುಮೆ ಹೊಸೂರು ಗ್ರಾಮದ ಶರತ್ ಕುಮಾರ್ (21) ಮೃತ ಯುವಕ. ಕಾರ್ಯನಿಮಿತ್ತ ಕೇರಳಾಪುರಕ್ಕೆ ತೆರಳಿದ್ದ ಯುವಕ ವಾಪಾಸ್ ಬರುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿ ವಾಹನ ಸಮೇತ ಕೆಳಗೆ ಬಿದ್ದಿದ್ದಾನೆ. ತಲೆ ಹಾಗು ಎದೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ಗೊರೂರು-ಕಾರ್ಲೆ ರಸ್ತೆಯ ಸತ್ತಿಗರಹಳ್ಳಿ ಸಮೀಪ ನಡೆದಿದೆ.

ಅರಕಲಗೂಡು ತಾಲ್ಲೂಕು ಗೊರವನಹಳ್ಳಿ ಗ್ರಾಮದ ಕೇಶವಯ್ಯ ಮೃತರು. ಸಹೋದರಿ ಗಂಗಮ್ಮ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೊಳೆನರಸೀಪುರದಿಂದ ಊರಿಗೆ ವಾಪಾಸ್ಸಾಗುತ್ತಿದ್ದಾಗ ಎದುರುಗಡೆಯಿಂದ ಬಂದ ಗೂಡ್ಸ್ ವಾಹನ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಇಬ್ಬರನ್ನು ಹಿಮ್ಸ್‌ಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಕೇಶವಯ್ಯ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದಸರಾ ಮಹೋತ್ಸವ: ಸಂಭ್ರಮದ ಶಮಿ ಪೂಜೆ

### ಶ್ರೀ ಸದಾಶಿವಸ್ವಾಮಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದಸರಾ ಮಹೋತ್ಸವದ ವಿಜಯದಶಮಿಯಂದು ಸಂಪ್ರದಾಯದಂತೆ ದಿವಂಗತ ಹಲಗೇಗೌಡ ಕುಟುಂಬಸ್ಥರಾದ ಪಾರ್ವತಮ್ಮನವರ ಮಗನಾದ ದಿನೇಶ್ ಬಾಬು ಅವರು ಬನ್ನಿ ಮಂಟಪದಲ್ಲಿ ಪುರಾಣ ಪ್ರಸಿದ್ಧ ಶ್ರೀ ಸದಾಶಿವಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಬನ್ನಿ ಕಡಿಯುವ ಮೂಲಕ ದಸರಾ ಮಹೋತ್ಸವ ಆಚರಿಸಲಾಯಿತು.

ನೂರಾರು ವರ್ಷಗಳ ಇತಿಹಾಸ: ಗ್ರಾಮದಲ್ಲಿ ದಸರಾ ಮಹೋತ್ಸವದ ವಿಜಯದಶಮಿಯಂದು ಗ್ರಾಮದ ಎಲ್ಲಾ ದೇವರುಗಳ ಉತ್ಸವಗಳೊಂದಿಗೆ ಶಮಿ ಪೂಜೆ ನೆರವೇರಿಸುವ ಮೂಲಕ ಬನ್ನಿಮಂಟಪದಲ್ಲಿ ದೇವರನ್ನು ಪ್ರತಿಷ್ಠಾಪಿಸುವ ಮೂಲಕ ಬನ್ನಿ ಕಡಿಯುವ ಪ್ರತೀತಿ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

ಈ ಸಂಪ್ರದಾಯದ ಉದ್ದೇಶ ಮೈಸೂರು ದಸರಾ ಮಾದರಿಯಲ್ಲಿ ಗ್ರಾಮ ದೇವತೆ ಸೇರಿದಂತೆ ಗ್ರಾಮದ ವಿವಿಧ ದೇವಾಲಯಗಳಲ್ಲಿ ಸುಮಾರು 9 ದಿನಗಳ ಕಾಲ ವಿಶೇಷ ಪೂಜೆಗಳು ನಡೆಯಲಿದೆ. ದಸರಾ ಮಹೋತ್ಸವದ ಕೊನೆಯ ದಿನವಾದ ವಿಜಯದಶಮಿಯಂದು ವಿವಿಧ ಪೂಜೆಗಳೊಂದಿಗೆ ದೇವರ ಉತ್ಸ ವ ಸಂಪ್ರದಾಯದಂತೆ ಬನ್ನಿ ಕಡಿಯುವ ಮೂಲಕ ಗ್ರಾಮದ ಒಳಿತಿಗಾಗಿ ದೇವರನ್ನು ಪ್ರಾರ್ಥಿಸುವ ಮೂಲಕ ಭಕ್ತರು ವಿಶೇಷ ಪೂಜೆ ಸಲ್ಲಿಸುವರು.



ಗ್ರಾಮದ ಹಿರೀಸಾವೆ ರಸ್ತೆಯಲ್ಲಿರುವ ಬನ್ನಿ ಮಂಟಪಗಳಲ್ಲಿ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಹಾಗೂ ಶ್ರೀ ಸದಾಶಿವ ಸ್ವಾಮಿ ದೇವರುಗಳನ್ನು ಪ್ರತಿಷ್ಠಾಪಿಸಿ ಸಂಪ್ರದಾಯದಂತೆ ಹಲಗೇಗೌಡ ಕುಟುಂಬಸ್ಥರಾದ ಪಾರ್ವತಮ್ಮನವರ ಮಗನಾದ ದಿನೇಶ್ ಬಾಬು ಅವರು ಬನ್ನಿ ಕಡಿಯುವ ಮೂಲಕ ಸಂಪ್ರದಾಯವನ್ನು ನಡೆಸುತ್ತಾ ಬರುತ್ತಿದ್ದಾರೆ.

ಅದೇ ರೀತಿ ಗ್ರಾಮ ದೇವತೆ ನುಗ್ಗೇಳ್ಳಮ್ಮ ದೇವಾಲಯದ ಆವರಣದಲ್ಲಿರುವ ಬನ್ನಿ ಮರದ ಮುಂಭಾಗ ಪುರ ವರ್ಗ ಹಿರೇಮಠದ ಡಾ. ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಬನ್ನಿ ಮರಕ್ಕೆ ಗ್ರಾಮದ ಸುಮಂಗಲಿ ಯರಿಂದ ಪೂಜೆ ನೆರವೇರಿದ ನಂತರ ಬನ್ನಿ ಕಡಿಯುವ ಮೂಲಕ ಪೂಜೆ ನೆರವೇರಿಸಲಾಗುತ್ತದೆ.

ಪೂಜೆಯಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಬನ್ನಿ ಮರದ ಎಲೆಯನ್ನು ಪ್ರಸಾದದ ರೂಪದಲ್ಲಿ ಕೊಡಲಾಗುತ್ತದೆ. ಉತ್ಸವದಲ್ಲಿ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ. ಶ್ರೀ ಸದಾಶಿವ ಸ್ವಾಮಿ. ಗ್ರಾಮ ದೇವತೆ ನುಗ್ಗೇಳ್ಳಮ್ಮ, ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ, ಶಕುನ ರಂಗನಾಥ ಸ್ವಾಮಿ, ಅರೇಕಲಮ್ಮ ದೇವರ ಉತ್ಸವವು ಗ್ರಾಮದ ರಾಜಬೀದಿಗಳಲ್ಲಿ ನೆರವೇರಿತು.

ಪೂಜಾ ಕಾರ್ಯಕ್ರಮದಲ್ಲಿ ಸದಾಶಿವಸ್ವಾಮಿ ಸೇವಾ ಸಮಿತಿ ಅಧ್ಯಕ್ಷ ಪೊಲೀಸ್ ಕುಮಾರ, ಗುಡಿಗೌಡ್ರು ಸೇರಿದಂತೆ ಎಲ್ಲಾ ದೇವಾಲಯಗಳ ಅರ್ಚಕರು ಮತ್ತು ಭಕ್ತರು ಪಾಲ್ಗೊಂಡಿದ್ದರು.

## ನ.3ರಂದು ಉಚಿತ ಸಾಮೂಹಿಕ ವಿವಾಹ

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ತಾಲ್ಲೂಕಿನ ಕಬ್ಬಳಿ ಶ್ರೀ ಆದಿಚುಂಚನಗಿರಿ ಮಠದಲ್ಲಿ ನ.3ರಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಐದನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವಧು, ವರರಿಗೆ ಉಚಿತ ವಸ್ತ್ರ, ಚಿನ್ನದ ತಾಳಿ ಸೇರಿದಂತೆ ವಿವಾಹದ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ಮಠ ನೋಡಿಕೊಳ್ಳಲಿದೆ.

ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಸಮ್ಮುಖದಲ್ಲಿ ವಿವಾಹ ಕಾರ್ಯಕ್ರಮ ನೆರ ವೇರಲಿದೆ.

ವಧು, ವರನ ಕಡೆಯವರು ಸೇರಿ 100 ಜನ ಪಾಲ್ಗೊಳ್ಳಬಹುದು. ವಿವಾಹದಲ್ಲಿ ಭಾಗಿಯಾಗುವವರಿಗೆ ಉಚಿತ ಊಟದ ವ್ಯವಸ್ಥೆ ಕೂಡ ಕಲ್ಪಿಸಲಾಗುತ್ತದೆ. ವಿವಾಹವಾಗುವ ಜೋಡಿಗಳು ನೋಂದಣಿಗೆ ಆಧಾರ್ ಗುರುತು ತರುವುದು ಕಡ್ಡಾಯವಾಗಿ ರುತ್ತದೆ. ವರನಿಗೆ ಕನಿಷ್ಠ 21, ವಧುವಿಗೆ ಕನಿಷ್ಠ 18 ವರ್ಷ ಪೂರ್ಣ ಗೊಂಡಿರಬೇಕು. ನೋಂದಣಿಯ ದಿನವೇ ವಧು, ವರರಿಗೆ ವಸ್ತ್ರಗಳನ್ನು ವಿತರಿಸಲಾಗುತ್ತದೆ. ನೋಂದಣಿಗೆ ಚಂದ್ರಶೇಖರ್ 94498 52401, ಶ್ರೀನಿವಾಸ್ 9035554286, 9035554287 ಹಾಗೂ ಕಬ್ಬಳಿ ಆದಿಚುಂಚನಗಿರಿ ಶಾಖಾಮಠವನ್ನು ಸಂಪರ್ಕಿಸಬಹುದು ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠ ಪ್ರಕಟಣೆಯಲ್ಲಿ ತಿಳಿಸಿದೆ.

**ರವೀಂದ್ರ ಜಡೇಜ, ಮೊಹಮ್ಮದ್ ಸಿರಾಜ್ ಬೌಲಿಂಗ್ ದಾಳಿಗೆ ನಲುಗಿ ಹೋದ ಎದುರಾಳಿ ತಂಡ**

## ಟೆಸ್ಟ್: ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ಭರ್ಜರಿ ಜಯ

• ಪ್ರಜೋದಯ ವರದಿ

**ಅಹಮದಾಬಾದ್:** ಇಲ್ಲಿನ ನರೇಂದ್ರ ಮೋದಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ಇನಿಂಗ್ಸ್ ಮತ್ತು 140 ರನ್‌ಗಳ ಬೃಹತ್ ಗೆಲುವು ಸಾಧಿಸಿದೆ.

286 ರನ್‌ಗಳ ಹಿನ್ನಡೆಯೊಂದಿಗೆ 2ನೇ ಇನಿಂಗ್ಸ್ ಆರಂಭಿಸಿದ ವಿಂಡೀಸ್ ರವೀಂದ್ರ ಜಡೇಜ ಹಾಗೂ ಮೊಹಮ್ಮದ್ ಸಿರಾಜ್ ಬೌಲಿಂಗ್ ದಾಳಿಗೆ ನಲುಗಿ ಹೋಯಿತು. ವೆಸ್ಟ್ ಇಂಡಿಸ್ ತನ್ನ 2ನೇ ಇನಿಂಗ್ಸ್‌ನಲ್ಲಿ ಕೇವಲ 146 ರನ್‌ಗಳಿಗೆ ಸರ್ವಪತನ ಕಾಣುವ ಮೂಲಕ ಇನಿಂಗ್ಸ್ ಹಾಗೂ 140 ರನ್‌ಗಳ ಸೋಲು ಅನುಭವಿಸಿತು.

ವಿಂಡೀಸ್ ಪರ ಅಲಿಕ್ ಅಥಾನಾಜೆ 38 ರನ್ ಗಳಿಸಿದ್ದು ವೈಯಕ್ತಿಕ ಗರಿಷ್ಠ ರನ್ ಸ್ಕೋರ್ ಎನಿಸಿಕೊಂಡರೆ, ಜಸ್ಟೀನ್ ಗ್ರೀವ್ಸ್ 25 ರನ್ ಸಿಡಿಸಿ ಕೊಂಚ ಹೋರಾಟ ನಡೆಸಿದರು.



ಅಂತಿಮವಾಗಿ ಜೇಡನ್ ಸೀಲ್ಸ್ 22 ರನ್ ಗಳಿಸಿ ಕೊನೆಯವರಾಗಿ ವಿಕೆಟ್ ಒಪ್ಪಿಸಿದರು. ಭಾರತದ ಪರ ರವೀಂದ್ರ ಜಡೇಜಾ 4 ವಿಕೆಟ್ ಪಡೆದು ಮಿಂಚಿದರು. ಮೊಹಮ್ಮದ್ ಸಿರಾಜ್ 3, ಕುಲದೀಪ್ ಯಾದವ್ 2 ಹಾಗೂ ವಾಷಿಂಗ್ಟನ್ ಸುಂದರ್ 1 ವಿಕೆಟ್ ಪಡೆದು ಮಿಂಚಿದರು. ವೆಸ್ಟ್ ಇಂಡೀಸ್ 3ನೇ ದಿನ ಕೇವಲ 2 ಸೆಷನ್‌ಗಳಲ್ಲೇ 45.1 ಓವರ್‌ಗಳಲ್ಲಿ 146 ರನ್‌ಗಳಿಗೆ ಆಲೌಟ್ ಆಗುವ ಮೂಲಕ ದೊಡ್ಡ ಅಂತರದಿಂದ ಸೋಲು ಕಂಡಿತು.

**ಮೊದಲ ಇನಿಂಗ್ಸ್‌ನಲ್ಲಿ 162ಕ್ಕೆ ಆಲೌಟ್**

ವೆಸ್ಟ್ ಇಂಡೀಸ್ ತನ್ನ ಮೊದಲ ಇನಿಂಗ್ಸ್‌ನಲ್ಲಿ ಕೇವಲ 162 ರನ್‌ಗಳಿಗೆ ಆಲೌಟ್ ಆಗುವ ಮೂಲಕ ನಿರಾಸೆ ಅನುಭವಿಸಿತು. ಜಸ್ಟಿನ್ ಗ್ರೀವ್ಸ್ (32), ಶೈ ಹೋಪ್ (26) ಹಾಗೂ ರೋಸ್ಟನ್ ಚೇಸ್ (24) ಕೊಂಚ ಹೋರಾಟ ನೀಡಿದರು. ಭಾರತದ ಪರ ಸಿರಾಜ್ 4, ಜಸ್‌ಪ್ರೀತ ಬುಮ್ರಾ 3, ಕುಲದೀಪ್ ಯಾದವ್ 2 ಹಾಗೂ ವಾಷಿಂಗ್‌ಟನ್ ಸುಂದರ್ 1 ವಿಕೆಟ್ ಪಡೆದು ಮಿಂಚಿದರು.

**ಭಾರತ 448ಕ್ಕೆ 5 ಡಿಕ್ಲೇರ್**

ಭಾರತದ ಕೆ.ಎಲ್.ರಾಹುಲ್ (100), ಧ್ರುವ್ ಜುರೆಲ್ (125) ಹಾಗೂ ರವೀಂದ್ರ ಜಡೇಜಾ (104 ಅಜೇಯ) ಬ್ಯಾಟಿಂಗ್ ಶತಕಗಳ ನೆರವಿನಿಂದ ಬರೋಬ್ಬರಿ 448 ರನ್ ಕಲೆಹಾಕಿ 286 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿತು. ವೆಸ್ಟ್ ಇಂಡೀಸ್ ಪರ ರೋಸ್ಟನ್ ಚೇಸ್ 2. ಜೇಡನ್ ಸೀಲ್, ವಾರಿಕನ್ ಹಾಗೂ ಪೀರೆ ತಲಾ ಒಂದು ವಿಕೆಟ್ ಪಡೆದುಕೊಂಡರು.

ಅಂತಿಮವಾಗಿ ಟೀಂ ಇಂಡಿಯಾ ಇನಿಂಗ್ಸ್ ಹಾಗೂ 140 ರನ್‌ಗಳ ಜಯ ಸಾಧಿಸಿ ಸರಣಿಯಲ್ಲಿ 1-0 ಮುನ್ನಡೆ ಕಾಯ್ದುಕೊಂಡಿದೆ. ಶತಕ ಹಾಗೂ 4 ವಿಕೆಟ್ ಪಡೆದ ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

## ಅರಸೀಕೆರೆಯಲ್ಲಿ ಚಿನ್ನಾಭರಣ ಕಳವು

• ಪ್ರಜೋದಯ ವರದಿ



**ಅರಸೀಕೆರೆ:** ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ನಗದು ಸೇರಿ 48 ಸಾವಿರ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಇಲ್ಲಿನ ಮಲ್ಲೇಶ್ವರ ನಗರದಲ್ಲಿ ನಡೆದಿದೆ.

ಬಸವರಾಜು ಎಂಬುವವರ ಮನೆಯಲ್ಲಿ ಸೆ.30 ರಿಂದ ಅ.3ರ ನಡುವೆ ಘಟನೆ ನಡೆದಿದೆ. ಬಸವಾಜು ಅವರು ಮನೆಗೆ ಬೀಗ ಹಾಕಿಕೊಂಡು ದಸರಾ ಹಬ್ಬದ ಹಿನ್ನಲೆಯಲ್ಲಿ ಬೆಂಗಳೂರಿಗೆ ತೆರಳಿದ್ದರು. ಅ.3 ರಂದು ವಾಪಾಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿ ಟ್ಟಿದ್ದ 4,500 ರೂ. ನಗದು, 8 ಗ್ರಾಂ ತೂಕದ 2 ಬೆಳ್ಳಿ ಕುಂಕುಮ ಬಟ್ಟಲು, 250 ಗ್ರಾಂ ತೂಕದ 2 ಬೆಳ್ಳಿ ದೀಪದ ಕಂಬ, 5 ಗ್ರಾಂ ತೂಕದ ಚಿನ್ನದ ಒಂದು ಜೊತೆ ಓಲೆ ಕಳವು ಮಾಡಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದುಶ್ಚಟಮುಕ್ತ ಸಮಾಜ ನಿರ್ಮಾಣವಾಗಲಿ

• ಪ್ರಜೋದಯ ವರದಿ

**ಆಲೂರು:** ಮಹಾತ್ಮ ಗಾಂಧೀಜಿಯ ಕನಸು ದುಶ್ಚಟಮುಕ್ತ ಸಮಾಜ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮಾಡುತ್ತಿರುವುದು ಶ್ಲಾಘನೀಯ ಎಂದು ತಹಸೀಲ್ದಾರ್ ಮಲ್ಲಿಕಾರ್ಜುನ್ ತಿಳಿಸಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್, ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಹಾಸನ ರವರ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಗಾಂಧಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪಾನಮುಕ್ತರಾಗಿ ಬದುಕುತ್ತಿರುವ ನವಜೀವನ ಸಮಿತಿ ಸದಸ್ಯರಿಗೆ ಗುಲಾಬಿ ಹೂವು ನೀಡಿ ಗೌರವಾರ್ಪಣೆ ಮಾಡಿ ಮಾತನಾಡಿ, ಮನುಷ್ಯ ದುಶ್ಚಟಗಳಿಂದ ದೂರ ಉಳಿದರೆ ಸುಖ ಸಂಸಾರದೊಂದಿಗೆ ಶಾಂತಿಯಿಂದ ಬದುಕಬಹುದು ಎಂದು ಅಭಿಪ್ರಾಯಪಟ್ಟರು.

ಶಿಕ್ಷಕ ಹಾಗೂ ಸಾಹಿತಿ ಎಂ. ಜಿ. ಪರಮೇಶ್ ಮಡಬಲು ಅವರು ಮಾತನಾಡಿ, ಸಮಾಜದಲ್ಲಿ ಮದ್ಯಪಾನ ಮಾಡುವವರ ಕುಟುಂಬಗಳ ಪರಿಸ್ಥಿತಿಯನ್ನರಿತ ದರ್ಮಸ್ಥಳ ಧರ್ಮಾಧಿಕಾರಿಗಳು, ಮದ್ಯಪಾನ ಮಾಡುವವರ ಅಭ್ಯಾಸ ಬಿಡಿಸಲು ಕಾರ್ಯಕ್ರಮ ರೂಪಿಸಿ ನವಜೀವನ ರೂಪಿಸಲು ಶ್ರಮಿಸುತ್ತಿದ್ದಾರೆ. ಅಲ್ಲದೆ ಅನೇಕ ಸಮಾಜಮುಖಿ ಕೆಲಸ ಮಾಡುತ್ತಿರುವುದರಿಂದ ಬಹುತೇಕ ಮಧ್ಯಮ ವರ್ಗದ ಕುಟುಂಬಗಳಲ್ಲಿ ಶಾಂತಿ ನೆಲೆಸಿದೆ ಎಂದರು.



ಇದೆ ಸಂದರ್ಭದಲ್ಲಿ ಜನಜಾಗೃತಿ ವೇದಿಕೆಯಿಂದ ಮುಖ್ಯಮಂತ್ರಿ ಅವರಿಗೆ ತಹಶೀಲ್ದಾರ್ ಮೂಲಕ ಹಕ್ಕೊತ್ತಾಯ ಮಂಡನೆಯನ್ನು ಪ್ರಾದೇಶಿಕ ವ್ಯಾಪ್ತಿಯ ಯೋಜನಾಧಿಕಾರಿ ಮುಕೇಶ್ ಅವರು ಒಪ್ಪಿಸಿದರು.

ಕಾರ್ಯಕ್ರಮದಲ್ಲಿ ಸಿದ್ದೇಶ್ ಕುಮಾರ್, ಬಿ. ರೇಣುಕ ಪ್ರಸಾದ್, ಎ.ಎಸ್.ಐ. ದೇವರಾಜ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಮಲ್ಲಿಕಾರ್ಜುನ್, ಹೆಚ್.ಬಿ. ಧರ್ಮರಾಜ್, ಎಂ.ಬಾಲಕೃಷ್ಣ, ಮೋಹನ್, ರಾಜಶೇಖರ್, ಕೆ.ರತ್ನಾಕರ ಕೊಠಾರಿ, ಯಶೋಧ, ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019